SEVA BHARATHI
सेवा ही परमो धर्मः

ಮೇ - 2026
ಸಂಚಿಕೆ - 05
ಸಂಪುಟ - 07

ಮಾಸಿಕ e - ನ್ಯೂಸ್ ಲೆಟರ್

# ಸೇವಾಪಥ

ಸೇವಾಭಾರತಿ (ರಿ.), ಬೆಳ್ತಂಗಡಿ ತಾ||
(ರಾಜ್ಯ ಪ್ರಶಸ್ತಿ ಪುರಸ್ಕೃತ ಸೇವಾ ಸಂಸ್ಥೆ -2022)



ಪ್ರಧಾನ ಕಚೇರಿ : ಸೇವಾನಿಕೇತನ, ಕನ್ಯಾಡಿ - II ಧರ್ಮಸ್ಥಳ ಅಂಚೆ, ಬೆಳ್ತಂಗಡಿ ತಾಲೂಕು, ದ.ಕ - 574216



## ದಿವ್ಯಾಂಗರ ಹಕ್ಕುಗಳು ಹಾಗೂ ಕಲ್ಯಾಣ ಯೋಜನೆಗಳ ಕುರಿತು ರಾಜ್ಯಪಾಲರಿಗೆ ಮನವಿ

## ಕನ್ಯಾಡಿ ಸೇವಾಭಾರತಿಯಿಂದ ಬೆಂಗಳೂರಿನ SEG Automotive India Private Limited ಭೇಟಿ .

## ಸೇವಾಭಾರತಿ ತಂಡದಿಂದ ಪಡುಬಿದ್ರಿ ಸೊಸೈಟಿಯ ಅಧ್ಯಕ್ಷರ ಭೇಟಿ

## ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ

## ಬೆನ್ನುಹುರಿ ಅಪಘಾತದ ನಡುವೆಯೂ ಆತ್ಮವಿಶ್ವಾಸದಿಂದ ಬದುಕು ಕಟ್ಟಿಕೊಂಡ ಮಾದಾಪುರದ ಸೈಫುದ್ದೀನ್ ಎಂ.ಇ

ಯಶೋಗಾಥೆ

Mob,9945491241 I E-mail : sevabharathikanyady@gmail.com I Website : www.sevabharathi.org

## ನಮ್ಮೊಂದಿಷ್ಟು

**ಆತ್ಮೀಯರಿಗೆಲ್ಲರಿಗೂ ನಮಸ್ಕಾರಗಳು,**

2029 ಕ್ಕೆ ಸೇವಾಭಾರತಿಗೆ ರಜತ ವರ್ಷದ ಸಂಭ್ರಮ. ಸಂಭ್ರಮದ ಆಚರಣೆಯ ಬಗೆಯನ್ನು ನಿರ್ಧರಿಸಬೇಕಷ್ಟೆ ಇನ್ನೂ. ಆದರೆ ಸಂಸ್ಥೆಗೆ ಮತ್ತು ಸ್ವತಃ ನನಗೆ ಒಂದು ಸುವರ್ಣ ಅವಕಾಶ ಒದಗಿ ಬಂದಿದೆ. ಅದುವೇ leadership transition ಅನ್ನುವಂತಹ ಒಂದು ಯೋಜನೆ. ಅದು ಬೆಂಗಳೂರಿನ ಧ್ವನಿ ಫೌಂಡೇಶನ್ ರೂಪುಗೊಳಿಸಿರುವುದು.

ಒಂದು ಸಂಸ್ಥೆ (NGO) ನಿರಂತರ ಒಬ್ಬ ಸಂಸ್ಥಾಪಕ ಅಥವಾ ಲೀಡರ್ ಗಳನ್ನು ಹೊಂದಿದ್ದು ಅವರಿಗೆ ವಯೋಸಹಜ, ಆರೋಗ್ಯ ಏರುಪೇರು ಅಥವಾ ಅವನು ಅಲ್ಲಿ ಅಸಮರ್ಥನಾದರೆ ಇಡೀ ಸಂಸ್ಥೆಯೇ ಕುಲಗೆಟ್ಟು ಹೋಗಬಾರದು, ಅದು ನಿರಂತರತೆಯಿಂದ ನಡಿತಾ ಇರಬೇಕು ಅನ್ನುವುದು ಈ ಯೋಜನೆಯ ಉದ್ದೇಶ. ನಿರಂತರತೆ ಇರಬೇಕಾದರೆ ನೂತನ ಉತ್ಸಾಹಿ ಸಿಬ್ಬಂದಿಯ ನೇಮಕವಾಗಬೇಕು. ಸಂಸ್ಥೆಯ ಟ್ರಸ್ಟಿಗಳು ವ್ಯವಸ್ಥೆಗೆ ಪೂರಕವಾಗಿ ಇರಬೇಕೆಂಬ ನಿಟ್ಟಿನಲ್ಲಿ ಸಂಸ್ಥಾಪಕ, ಎರಡು ಟ್ರಸ್ಟಿಗಳು, ಒಬ್ಬ ನೂತನ EO/ CEO/ ED ಗಳಿಗೆ ತರಬೇತಿಗಳು ಸಿಗುತ್ತದೆ. ಮಾತ್ರವಲ್ಲ ಸಿಬ್ಬಂದಿಯ ವೇತನದೊಂದಿಗೆ ಭರಪೂರ ಮಾಹಿತಿಗಳು ಲಭ್ಯವಾಗುತ್ತದೆ. ಇದು 15 ತಿಂಗಳ ಅವಧಿಯ ಯೋಜನೆ. 56 ಸಂಸ್ಥೆಗಳಲ್ಲಿ ಆಯ್ಕೆಗೊಂಡ 20 ಸಂಸ್ಥೆಗಳಲ್ಲಿ ನಮ್ಮ ಸಂಸ್ಥೆ ಸೇವಾಭಾರತಿ ಒಂದು ಎನ್ನುವುದು ಸಂತೋಷ. ಇದು ಸಂಸ್ಥೆಯ ಬೆಳವಣಿಗೆಗಂತೂ ಅನಿವಾರ್ಯವೇ ಆಗಿತ್ತು

ನಾನು ನನ್ನ ಸಂಸ್ಥೆಯೊಂದಿಗಿನ 25 ವರ್ಷ ಅದು ಜೀವಮಾನದ ಅದ್ಭುತ ಸೇವಾ ಬದುಕು ಎಂದು ಹೇಳುತ್ತಿದ್ದೇನೆ. ಆದರೆ ಜವಾಬ್ದಾರಿಗಳು ಸಾಕು ಅನ್ನೋದು ಮನದಾಳದ ಮಾತು. ಅಲ್ಲದೆ ಅದು ಹಾಗೆಯೇ ಆದರೆ ಮುಂದಿನ ಸಂಸ್ಥೆಯ ಅಭಿವೃದ್ಧಿಗೂ ಅಡಿಪಾಯವಾಗುತ್ತದೆ.

ಇನ್ನುಳಿದಂತೆ ಮೊದಲ ಮಹಡಿಯ ಕೆಲಸಗಳು ನಡೆಯುತ್ತಿದೆ. ಎರಡನೇ ಮಹಡಿಯ ಸೆಂಟ್ರಿಂಗ್ ಕೆಲಸ ಆಗಿ ಸ್ಲಾಬ್ ಗೆ ಕಾಂಕ್ರೀಟ್ ಹಾಕುವ ಕೆಲಸ ಮುಗಿದಿರುತ್ತದೆ ಇನ್ನು ಮೂರು ತಿಂಗಳೊಳಗೆ ಎರಡು ಮಹಡಿಯು ಲೋಕಾರ್ಪಣೆಗೆ ಸಿದ್ಧವಾಗಲಿದೆ..

ಸಕ್ಷಮ ಸಂಸ್ಥೆಯ ವತಿಯಿಂದ ರಾಜ್ಯಪಾಲರಾದ ಥಾವರ್ ಚಂದ್ ಗೆಹ್ಲೋಟ್ ರವರನ್ನು ಭೇಟಿ ಮಾಡಲಾಯಿತು. ಈ ಸಂದರ್ಭದಲ್ಲಿ ವಿಶೇಷ ಚೇತನರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಶೀಘ್ರ ಪರಿಹಾರಕ್ಕಾಗಿ ಸರ್ಕಾರ ತ್ವರಿತ ಮತ್ತು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳುವಂತೆ ಒತ್ತಾಯಿಸಲಾಯಿತು.

**ಒಟ್ಟಿನಲ್ಲಿ ಸೇವಾ ಕಾರ್ಯ ನಿರಂತರವಾಗಿದೆ**



**ಸೇವಾ ಹಿ ಪರಮೋ ಧರ್ಮಃ**

ವಂದನೆಗಳೊಂದಿಗೆ

**ತಮ್ಮವ**
**ಕೆ. ವಿನಾಯಕ ರಾವ್**

## ಏಪ್ರಿಲ್ ತಿಂಗಳ ಸೇವಾಪಥ ಬಿಡುಗಡೆ



**ಏಪ್ರಿಲ್ ತಿಂಗಳ ಸೇವಾಭಾರತಿಯ ಸೇವಾಕಾರ್ಯಗಳ ಈ - ನ್ಯೂಸ್ ಲೆಟರ್ ಸೇವಾಪಥವನ್ನು ಸಂಸ್ಥೆಯ ಹಿತೈಷಿ ಹಾಗೂ ಕನ್ಯಾಡಿಯ ಕೂಷ್ಮಾಂಡಿನಿ ಸ್ಟೋರ್ ನ ಮಾಲಕರಾದ ಶ್ರೀ ಸುನಿಲ್ ಕುಮಾರ್ ಜೈನ್ ರವರು ಬಿಡುಗಡೆಗೊಳಿಸಿರುತ್ತಾರೆ.**


### ನಮ್ಮ ವಿಳಾಸ :

**ಪ್ರಧಾನ ಕಚೇರಿ**

**ಸೇವಾನಿಕೇತನ, ಕನ್ಯಾಡಿ - II ,ಧರ್ಮಸ್ಥಳ ಗ್ರಾಮ, ಬೆಳ್ತಂಗಡಿ ತಾಲೂಕು 574 216 : 99454 91241**

### ಸೇವಾ ಕೇಂದ್ರ :

**ಸೇವಾಧಾಮ ಸೌತಡ್ಕ**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ಚೇತನ ಕೇಂದ್ರ) ಸೌತಡ್ಕ ಶ್ರೀ ಮಹಾಗಣಪತಿ ದೇವಸ್ಥಾನದ ಬಳಿ ಕೊಕ್ಕಡ ಗ್ರಾಮ 574 198 : 94482 54888**

**ಸೇವಾಧಾಮ ಬೈಂದೂರು**

**(ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಒತ್ತಡ ಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರ) ಹೇನಬೇರು ಬೈಂದೂರು, ಪಡುವರಿ ಪೋಸ್ಟ್, ಬೈಂದೂರು ತಾಲೂಕು, ಉಡುಪಿ ಜಿಲ್ಲೆ - 576214**



### ನಮ್ಮ ತಂಡ :

| | | |
|---|---|---|
| ಶ್ರೀ ಕೆ. ವಿನಾಯಕ ರಾವ್ | - | ಅಧ್ಯಕ್ಷರು |
| ಶ್ರೀ ಕೆ. ಬಾಲಕೃಷ್ಣ | - | ಉಪಾಧ್ಯಕ್ಷರು |
| ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ | - | ಕಾರ್ಯದರ್ಶಿ |
| ಶ್ರೀ ಜಯರಾಜ್ ಸಾಲ್ಯಾನ್ | - | ಖಜಾಂಚಿ |
| ಶ್ರೀಮತಿ ಸ್ವರ್ಣಗೌರಿ | - | ಟ್ರಸ್ಟಿ |
| ಶ್ರೀ ಕೆ. ಯು. ಗಿರೀಶ್ ರಾವ್ | - | ಟ್ರಸ್ಟಿ |
| ಶ್ರೀ ಪೃಥ್ವೀಶ | - | ಟ್ರಸ್ಟಿ |

### ಸಲಹಾ ಮಂಡಳಿ :

ಶ್ರೀ CA ಗುಜ್ಜಾಡಿ ಪ್ರಭಾಕರ ನರಸಿಂಹ ನಾಯಕ್
ಡಾ. ಎ. ಜಯಕುಮಾರ್ ಶೆಟ್ಟಿ

### ಸಂಚಾಲಕರು :

| | | |
|---|---|---|
| ಶ್ರೀ ಕೆ. ಪುರಂದರ ರಾವ್ | - | ಸೇವಾಧಾಮ |
| ಶ್ರೀಮತಿ ಮಮತಾ ಬೊಳ್ಳ | - | ಸಬಲಿನಿ |
| ಶ್ರೀ ಅಖಿಲೇಶ್ ಶೆಟ್ಟಿ, ನೇತ್ರಾವತಿ | - | ಆರೋಗ್ಯಮ್ |

# ದಿವ್ಯಾಂಗರ ಹಕ್ಕುಗಳು ಹಾಗೂ ಕಲ್ಯಾಣ ಯೋಜನೆಗಳ ಕುರಿತು ರಾಜ್ಯಪಾಲರಿಗೆ ಮನವಿ



**ಬೆಂಗಳೂರು (ಮೇ 16):** ಸಕ್ಷಮ ಸಂಸ್ಥೆಯ ವತಿಯಿಂದ ಅದರ ತಂಡದ ಪ್ರಮುಖರು ಹಾಗೂ ಸೇವಾಭಾರತಿಯ ಅಧ್ಯಕ್ಷ ಮತ್ತು ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಅವರು ರಾಜ್ಯಪಾಲರಾದ ಶ್ರೀ ಥಾವರ್ ಚಂದ್ ಗೆಹ್ಲೋಟ್ ಅವರನ್ನು ಮೇ 16 ರಂದು ಭೇಟಿ ಮಾಡಿದರು. ಈ ಸಂದರ್ಭದಲ್ಲಿ ದಿವ್ಯಾಂಗರ ಹಕ್ಕುಗಳು, ನ್ಯಾಯಸಮ್ಮತ ಸೌಲಭ್ಯಗಳ ಒದಗಿಸುವಿಕೆ, ಕನಿಷ್ಠ ವೇತನ ಜಾರಿ, ಮಾಸಾಶನ ಹೆಚ್ಚಳ ಹಾಗೂ ವಿಶೇಷ ನಿಧಿ ರಚನೆ ಸೇರಿದಂತೆ ಹಲವು ಪ್ರಮುಖ ಬೇಡಿಕೆಗಳ ಕುರಿತು ರಾಜ್ಯಪಾಲರಿಗೆ ಮನವಿ ಸಲ್ಲಿಸಲಾಯಿತು.

ಅದರ ಜೊತೆಗೆ, ವಿಶೇಷ ಚೇತನರ ಕಲ್ಯಾಣ, ಸ್ವಾವಲಂಬನೆ ಹಾಗೂ ಸಮಾಜದಲ್ಲಿ ಸಮಾನ ಅವಕಾಶಗಳನ್ನು ಖಚಿತಪಡಿಸಲು ಸರ್ಕಾರ ಸೂಕ್ತ ಯೋಜನೆಗಳು ಮತ್ತು ವಿಶೇಷ ಚೇತನರು ಎದುರಿಸುತ್ತಿರುವ ವಿವಿಧ ಸಮಸ್ಯೆಗಳ ಶೀಘ್ರ ಪರಿಹಾರಕ್ಕಾಗಿ ಸರ್ಕಾರ ತ್ವರಿತ ಮತ್ತು ಪರಿಣಾಮಕಾರಿ ಕ್ರಮಗಳನ್ನು ಕೈಗೊಳ್ಳಬೇಕೆಂದು ಒತ್ತಾಯಿಸಲಾಯಿತು.

# ಕನ್ಯಾಡಿ ಸೇವಾಭಾರತಿಯಿಂದ ಬೆಂಗಳೂರಿನ SEG Automotive India Private Limited ಭೇಟಿ .



**ಬೆಂಗಳೂರು (ಮೇ. 07)** SEG ಆಟೋಮೋಟಿವ್ ಇಂಡಿಯಾ ಪ್ರೈವೇಟ್ ಲಿಮಿಟೆಡ್ ನ IR ಲೀಗಲ್ ಮತ್ತು ಕಂಪ್ಲೈನ್ಸ್ ನ ಮುಖ್ಯಸ್ಥರಾದ ಶ್ರೀ ನಾಗಭೂಷಣ ಕೆ ಹಾಗೂ ಮ್ಯಾನೇಜರ್ ಶ್ರೀ ವಿಜಯಕುಮಾರ್ ರವರನ್ನು ಸೇವಾಭಾರತಿ ತಂಡ ಮೇ 07 ರಂದು ಭೇಟಿ ನೀಡಿ ಸೇವಾಭಾರತಿಯ ಸೇವಾಕಾರ್ಯಗಳ ಬಗ್ಗೆ ಮಾಹಿತಿ ನೀಡಲಾಯಿತು.

ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಕುರಿತು ಪ್ರಸ್ತಾಪಿಸಿ ಸಹಕರಿಸುವಂತೆ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಉಪಸ್ಥಿತರಿದ್ದರು.

## ಅರ್ಥಪೂರ್ಣ ಮಾದರಿ ಜನ್ಮದಿನಾಚರಣೆ ಶ್ರೀಮತಿ ರವಿಜಾ ಎಸ್ ರಾವ್, ಕನ್ಯಾಡಿ




**ಕನ್ಯಾಡಿ (ಮೇ 05):** ಶ್ರೀಮತಿ ರವಿಜಾ ಎಸ್ ರಾವ್ ತಮ್ಮ ಜನ್ಮದಿನದ ಶುಭ ಸಂದರ್ಭದಲ್ಲಿ ಸೇವಾಧಾಮ ಚಟುವಟಿಕೆಗಳಿಗೆ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಈ ಸಹಾಯದಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಜೀವನದಲ್ಲಿ ಆರೈಕೆ, ಪುನಶ್ಚೇತನ ಮತ್ತು ಹೊಸ ಆಶಾಕಿರಣ ಮೂಡುತ್ತಿದೆ.

ಸೇವಾಭಾರತಿಯ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ಸಿಬ್ಬಂದಿ ವರ್ಗದವರು ಸಂಸ್ಥೆಯ ಹಾಗೂ ಫಲಾನುಭವಿಗಳ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಕೃತಜ್ಞತೆಗಳನ್ನು ಸಲ್ಲಿಸಿದರು.

ನಿಮ್ಮ ಜೀವನ ಸದಾ ಆರೋಗ್ಯ, ಸಂತೋಷ, ಶಾಂತಿ ಮತ್ತು ಸಮೃದ್ಧಿಯಿಂದ ಕೂಡಿರಲಿ ಎಂದು ಹಾರೈಸುತ್ತೇವೆ.

## ಸೇವಾಧಾಮ ಪುನಶ್ಚೇತನ ಕೇಂದ್ರದ ನಿರ್ಮಾಣಕ್ಕಾಗಿ ಉಜಿರೆಯ ರೊ| ಡಾ. ಎ. ಜಯಕುಮಾರ್ ಶೆಟ್ಟಿಯವರಿಂದ ದೇಣಿಗೆ




**ಕನ್ಯಾಡಿ (ಮೇ 11):** ರೊ| ಡಾ. ಎ. ಜಯಕುಮಾರ್ ಶೆಟ್ಟಿ, ತಮ್ಮ ಜನ್ಮದಿನದ ಶುಭ ಸಂದರ್ಭ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ 'ಸೇವಾಧಾಮ' ಪುನಶ್ಚೇತನ ಕೇಂದ್ರ ನಿರ್ಮಾಣಕ್ಕಾಗಿ ರೂ. 10,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿಯ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ಹಾಗೂ ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಕೃತಜ್ಞತೆಗಳನ್ನು ಸಲ್ಲಿಸಿದರು.

## ಸಕ್ಷಮ ಸಂಸ್ಥೆಯ ಪ್ರಾಂತ ಯೋಜನಾ ಬೈಠಕ್ - 2026ರಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಶ್ರೀ ಕೆ ವಿನಾಯಕ ರಾವ್ ಭಾಗಿ



**ಬೆಂಗಳೂರು (ಮೇ 17):** ವಿಶೇಷ ಚೇತನರ ಸಬಲೀಕರಣ ಹಾಗೂ ಅವರ ಸಮಗ್ರ ಅಭಿವೃದ್ಧಿಯನ್ನು ಉದ್ದೇಶವಾಗಿಟ್ಟುಕೊಂಡು ಸಕ್ಷಮ ಸಂಸ್ಥೆ ವತಿಯಿಂದ ಆಯೋಜಿಸಲಾದ ಪ್ರಾಂತ ಯೋಜನಾ ಬೈಠಕ್ - 2026 ಕಾರ್ಯಕ್ರಮದಲ್ಲಿ ಸೇವಾಭಾರತಿ ಅಧ್ಯಕ್ಷ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್ ರವರು ಮೇ 17 ರಂದು ಭಾಗವಹಿಸಿದರು. ಕಾರ್ಯಕ್ರಮದಲ್ಲಿ ವಿಶೇಷ ಚೇತನರ ಸ್ವಾವಲಂಬನೆ ಹಾಗೂ ಸಮಾಜದ ಮುಖ್ಯವಾಹಿನಿಗೆ ಅವರನ್ನು ಇನ್ನಷ್ಟು ಸಮರ್ಪಕವಾಗಿ ಸೇರಿಸುವ ಬಗ್ಗೆ ಚರ್ಚೆಗಳು ನಡೆದವು. ವಿವಿಧ ಜಿಲ್ಲೆಗಳಿಂದ ಆಗಮಿಸಿದ ಕಾರ್ಯಕರ್ತರು ತಮ್ಮ ಸೇವಾ ಅನುಭವಗಳನ್ನು ಹಂಚಿಕೊಂಡರು.

## ಸಿರ್ಸಿ ವಿಭಾಗದ ಸೇವಾ ಪ್ರಮುಖರಿಂದ ಕನ್ಯಾಡಿ ಸೇವಾನಿಕೇತನಕ್ಕೆ ಭೇಟಿ




**ಕನ್ಯಾಡಿ (ಮೇ 05):** ರಾಷ್ಟ್ರೀಯ ಸ್ವಯಂಸೇವಕ ಸಂಘದ ಸಿರ್ಸಿ ವಿಭಾಗ ಸೇವಾ ಪ್ರಮುಖ್ ಶ್ರೀ ಮೋಹನ್ ಗುನಗಾ ಸೇವಾಭಾರತಿ ಕನ್ಯಾಡಿ ಇದರ ಪ್ರಧಾನ ಕಾರ್ಯಾಲಯ ಸೇವಾನಿಕೇತನಕ್ಕೆ ಹಾಗೂ ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಮೇ 11 ರಂದು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಹಾಗೂ ಸೇವಾಧಾಮ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಸ್ವಾಗತಿಸಿ, ಸಂಸ್ಥೆಯ ಪ್ರಸಕ್ತ ಸೇವಾಕಾರ್ಯ ಹಾಗೂ ಯೋಜನೆಗಳ ಬಗ್ಗೆ ವಿವರವಾಗಿ ಮಾಹಿತಿ ನೀಡಿದರು.

## ಕನ್ಯಾಡಿ ಸೇವಾಭಾರತಿಯಿಂದ ದ.ಕ ಜಿಲ್ಲೆಯ ಲೋಕಸಭಾ ಸದಸ್ಯರ ಭೇಟಿ




**ಮಂಗಳೂರು (ಮೇ 12):** ದಕ್ಷಿಣ ಕನ್ನಡ ಜಿಲ್ಲೆಯ ಲೋಕಸಭಾ ಸದಸ್ಯರಾಗಿರುವ ಕ್ಯಾಪ್ಟನ್ ಬ್ರಿಜೇಶ್ ಚೌಟ ರವರನ್ನು ಸೇವಾಭಾರತಿ ತಂಡದಿಂದ ಮೇ 12 ರಂದು ಭೇಟಿ ನೀಡಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಕುರಿತು ಪ್ರಸ್ತಾಪಿಸಿ ಸಹಕರಿಸುವಂತೆ ಮನವಿ ಮಾಡಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಸೇವಾಭಾರತಿಯ ಖಜಾಂಚಿ ಶ್ರೀ ಜೈ ರಾಜ್ ಸಾಲ್ಯಾನ್ ಕಾನರ್ಪ, ಟ್ರಸ್ಟಿ ಶ್ರೀ ಪೃಥ್ವಿಶ್ ಹಾಗೂ ಕುವೆಟ್ಟು ಮಹಾಶಕ್ತಿ ಕೇಂದ್ರದ ಅಧ್ಯಕ್ಷರಾದ ಶ್ರೀ ಚಂದ್ರಕಾಂತ್ ನಿಡ್ಡಾಜೆ, ಸ್ವಯಂಸೇವಕರಾದ ಶ್ರೀ ಜಯರಾಜ್ ರವರು ಉಪಸ್ಥಿತರಿದ್ದರು.

## ಕನ್ಯಾಡಿಯ ಶ್ರೀ ರಾಜೇಂದ್ರ ಅಜ್ರಿಯವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ರೂ. 20,000/- ದೇಣಿಗೆ




**ಕನ್ಯಾಡಿ (ಮೇ.15):** ಧರ್ಮಸ್ಥಳ ಗ್ರಾಮದ ಕನ್ಯಾಡಿಯ ಶ್ರೀ ರಾಜೇಂದ್ರ ಅಜ್ರಿ ರವರು ಕನ್ಯಾಡಿ ಸೇವಾನಿಕೇತನಕ್ಕೆ ಮೇ 15 ರಂದು ಭೇಟಿ ನೀಡಿ ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ. 20,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸೇವಾಭಾರತಿ ದಕ್ಷಿಣ ಕನ್ನಡ ಮತ್ತು ಕೊಡಗು ಕ್ಷೇತ್ರ ಸಂಯೋಜಕರಾದ ಶ್ರೀ ಕುಸುಮಾಧರ್ ರವರು ದೇಣಿಗೆಯನ್ನು ಸ್ವೀಕರಿಸಿ, ಸಂಸ್ಥೆಯ ಪರವಾಗಿ ಶುಭಹಾರೈಸಿ ಧನ್ಯವಾದವಿತ್ತರು.

## ಸೌತಡ್ಕ ಸೇವಾಧಾಮಕ್ಕೆ ವಿವೇಕಾನಂದ ಕಾಲೇಜು ವಿದ್ಯಾರ್ಥಿಗಳ ಭೇಟಿ



**ಸೌತಡ್ಕ (ಮೇ 08):** ಪುತ್ತೂರು ವಿವೇಕಾನಂದ ಕಾಲೇಜು ಮನೋವಿಜ್ಞಾನ ವಿಭಾಗದ ವಿದ್ಯಾರ್ಥಿಗಳು ಮೇ 08 ರಂದು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿದರು.

ಈ ಸಂದರ್ಭದಲ್ಲಿ ಸೇವಾಭಾರತಿಯ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ರವರು ವಿದ್ಯಾರ್ಥಿಗಳನ್ನು ಆತ್ಮೀಯವಾಗಿ ಸ್ವಾಗತಿಸಿ ಸಂಸ್ಥೆಯ ಉದ್ದೇಶಗಳು, ಸೇವಾಧಾಮದಲ್ಲಿ ನಡೆಯುತ್ತಿರುವ ವಿವಿಧ ಸೇವಾ ಚಟುವಟಿಕೆಗಳು ಹಾಗೂ ಪುನಶ್ಚೇತನ ಕಾರ್ಯಗಳ ಕುರಿತು ಮಾಹಿತಿಯನ್ನು ನೀಡಿದರು.ವಿದ್ಯಾರ್ಥಿಗಳು ಸಂಸ್ಥೆಯ ವಿವಿಧ ಕಾರ್ಯಚಟುವಟಿಕೆಗಳನ್ನು ವೀಕ್ಷಿಸಿ, ಅಲ್ಲಿನ ಕಾರ್ಯವೈಖರಿ, ಸೇವಾ ಮನೋಭಾವ ಮತ್ತು ಸಮಾಜಸೇವೆಯ ಮೌಲ್ಯಗಳನ್ನು ಸಮೀಪದಿಂದ ಅವಲೋಕಿಸಿದರು. ಈ ಭೇಟಿ ವಿದ್ಯಾರ್ಥಿಗಳಿಗೆ ಸೇವಾ ಚಿಂತನೆ ಹಾಗೂ ಸಾಮಾಜಿಕ ಜವಾಬ್ದಾರಿಯ ಅರಿವು ಮೂಡಿಸುವಲ್ಲಿ ಸಹಕಾರಿಯಾಯಿತು.

## ಸೇವಾಧಾಮದ ಫಲಾನುಭವಿಯ ಮನೆಗೆ ಸೇವಾಭಾರತಿಯ ಅಧ್ಯಕ್ಷರ ಭೇಟಿ



**ಬೆಂಗಳೂರು (ಮೇ.6):** ಸೌತಡ್ಕ ಸೇವಾಧಾಮದಲ್ಲಿ ಪುನಶ್ಚೇತನವನ್ನು ಪಡೆದುಕೊಂಡ ಫಲಾನುಭವಿಗಳಾದ ಬೆಂಗಳೂರಿನ ಶ್ರೀ ಗಿರೀಶ್ ಹಾಗೂ ಹೊನ್ನಾವರದ ಶ್ರೀ ಸುಬ್ರಹ್ಮಣ್ಯ ಗಣೇಶ ಹೆಗ್ಡೆಯವರ ಕುಟುಂಬಸ್ಥರನ್ನು ಸೇವಾಭಾರತಿಯ ಅಧ್ಯಕ್ಷರಾದ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ. ವಿನಾಯಕ ರಾವ್ ಹಾಗೂ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಮೇ 06 ರಂದು ಭೇಟಿ ನೀಡಿ ಫಲಾನುಭವಿಗಳ ಆರೋಗ್ಯ ಹಾಗೂ ಯೋಗಕ್ಷೇಮವನ್ನು ವಿಚಾರಿಸಿ, ಅವರ ಕುಟುಂಬಸ್ಥರೊಂದಿಗೆ ಆತ್ಮೀಯವಾಗಿ ಮಾತುಕತೆ ನಡೆಸಿದರು.

## ಬೈಂದೂರು ಶಾಸಕರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆಯವರ ಜನ್ಮದಿನ ಪ್ರಯುಕ್ತ ಸೇವಾಧಾಮದಲ್ಲಿ ಭೋಜನ ವ್ಯವಸ್ಥೆ




ಬೈಂದೂರು ವಿಧಾನಸಭಾ ಕ್ಷೇತ್ರದ ಶಾಸಕರಾದ ಶ್ರೀ ಗುರುರಾಜ್ ಶೆಟ್ಟಿ ಗಂಟಿಹೊಳೆ ಅವರ ಜನ್ಮದಿನದ ಪ್ರಯುಕ್ತ, ಶಕ್ತಿ ಕೇಂದ್ರ ಗುಜ್ಜಾಡಿ ಅಭಿಮಾನಿಗಳ ವತಿಯಿಂದ ಮೇ 12ರಂದು ಬೈಂದೂರಿನ ಒತ್ತಡಗಾಯ ನಿರ್ವಹಣಾ ಮತ್ತು ಪುನಶ್ಚೇತನ ಕೇಂದ್ರ, ಸೇವಾಧಾಮದಲ್ಲಿ ಒಂದು ದಿನದ ಭೋಜನದ ವ್ಯವಸ್ಥೆಯನ್ನು ಮಾಡಲಾಯಿತು.

ಈ ಸಂದರ್ಭದಲ್ಲಿ ಅಭಿಮಾನಿಗಳು ಸೇವಾಧಾಮಕ್ಕೆ ಭೇಟಿ ನೀಡಿ ಅಲ್ಲಿನ ಸನಿವಾಸಿಗಳೊಂದಿಗೆ ಆತ್ಮೀಯವಾಗಿ ಮಾತುಕತೆ ನಡೆಸಿ ಶಾಸಕರ ಜನ್ಮದಿನವನ್ನು ಸಮಾಜಮುಖಿ ಕಾರ್ಯಗಳ ಮೂಲಕ ಆಚರಿಸಿರುವ ಅಭಿಮಾನಿಗಳ ಈ ಸೇವಾಕಾರ್ಯಕ್ಕೆ ಮೆಚ್ಚುಗೆಯನ್ನು ವ್ಯಕ್ತಪಡಿಸಲಾಯಿತು. ಈ ಸಂದರ್ಭದಲ್ಲಿ ಸೇವಾಧಾಮದ ಸಿಬ್ಬಂದಿವರ್ಗದವರು ಉಪಸ್ಥಿತರಿದ್ದರು.

## ಸೇವಾಧಾಮದಲ್ಲಿ ಪುನಶ್ಚೇತನಗೊಂಡ ಸನಿವಾಸಿಗಳ ಅನಿಸಿಕೆ

ನನ್ನ ಹೆಸರು ಗಿರೀಶ್ ಸಿ.ಕೆ ನಾನು ದಾವಣಗೆರೆ ಜಿಲ್ಲೆಯ ಚೆನ್ನಗಿರಿ ತಾಲೂಕಿನವನು. ನಾನು ಬೈಕಿನಲ್ಲಿ ಹೋಗುವಾಗ ಕಾರಿಗೆ ಡಿಕ್ಕಿ ಹೊಡೆದು ಬಿದ್ದಿದ್ದು ನನ್ನ L2 ಇಂಜೂರಿ T4 ಆದ ನಂತರ ನನಗೆ ಮನೆಯಲ್ಲಿ ಇರುವ ಹಾಗೆ ಆಯಿತು. ನಾನು Bed to chair ಅಥವಾ Chair to Bed ಶಿಫ್ಟ್ ಆಗಲು ಮತ್ತು ಸ್ನಾನಕ್ಕೆ ಆಗಲಿ ಇನ್ನೊಬ್ಬರ ಸಹಾಯ ಬೇಕಿತ್ತು ಆಗ ನನಗೆ ಒಬ್ಬರ ಪರಿಚಯದಿಂದ ನಾನು ಸೇವಾಧಾಮಕ್ಕೆ ಬರುವ ಹಾಗೆ ಆಯಿತು ಅವರ ಹೆಸರು ಸಂಪತ್ ಅಂತ ಅವರು ಸಹ ಗಾಲಿಕುರ್ಚಿಯಲ್ಲಿ ಇದ್ದಾರೆ. ಅವರು ಇಲ್ಲಿ ಇದ್ದು ತುಂಬಾ ಕಲಿತು ಹೋಗಿದ್ದಾರೆ ಅವರ ಸಹಾಯದಿಂದ ನಾನು ಇಲ್ಲಿಗೆ ಬಂದಿದ್ದೇನೆ ಇಲ್ಲಿ ಬಂದಮೇಲೆ ನಾನು ಒಬ್ಬನೇ wheelchair ನಿಂದ Bed ಗೆ ಒಬ್ಬನೇ ಶಿಫ್ಟ್ ಆಗ್ತೇನೆ. ಇನ್ನಿತರ ಕೆಲಸಗಳನ್ನು ಒಬ್ಬನೇ ಮಾಡುತ್ತೇನೆ ಇಲ್ಲಿ ಉತ್ತಮ ತರಬೇತಿ ನೀಡುತ್ತಾರೆ ನಮ್ಮ ಜೀವನ ಹೇಗೆ ರೂಪಿಸಿಕೊಳ್ಳುವುದು ಅನ್ನೋದನ್ನು ಚೆನ್ನಾಗಿ ಹೇಳಿಕೊಡುತ್ತಾರೆ. ಇಲ್ಲಿ ಅತ್ಯುತ್ತಮ ಫಿಸಿಯೋಥೆರಪಿಸ್ಟ್ ಇದ್ದಾರೆ ಅವರು ಚೆನ್ನಾಗಿ ಹೇಳಿಕೊಡುತ್ತಾರೆ ಇನ್ನು ಈ ಸಂಸ್ಥೆ ಅತ್ಯುತ್ತಮವಾಗಿ ಬೆಳೆಯಲಿ ಎಂದು ದೇವರಲ್ಲಿ ಪ್ರಾರ್ಥಿಸೋಣ ಇಲ್ಲಿನ ಸ್ವಲ್ಪ ಬದಲಾವಣೆಯ ವಿಚಾರವೆಂದರೆ ನಾನು ಇಲ್ಲಿ ಬೇಸಿಗೆಯಲ್ಲಿ ಬಂದು ಹೋಗಿದ್ದರಿಂದ ಫ್ಯಾನ್ ಇದ್ದು ಸಮಸ್ಯೆ ಇದೆ, ನೀರಿನ ಸಮಸ್ಯೆ ಕೂಡ ಮತ್ತು ಕರೆಂಟ್ನ ಸಮಸ್ಯೆ, ಈ ಮೂರರ ಸಮಸ್ಯೆಗಳು ಗಮನ ಹರಿಸಬೇಕು ಎಂದು ವಿನಂತಿಸುತ್ತೇನೆ.

**ಇತಿ ತಮ್ಮ ವಿಶ್ವಾಸಿ**
**ಗಿರೀಶ್ ಸಿ.ಕೆ, ಚೆನ್ನಗಿರಿ**

## ಸೇವಾಧಾಮದ ಫಲಾನುಭವಿ ನಿಶಿತಾಗೆ ಆಸ್ಟ್ರೇಲಿಯಾದ ಶ್ರೀಮತಿ ದಿ ಎಲಿಸ್ ರವರಿಂದ ಆರ್ಥಿಕ ನೆರವು





**ಸೌತಡ್ಕ (ಮೇ 04):** ಆಸ್ಟ್ರೇಲಿಯಾದ ಶ್ರೀಮತಿ ದಿ ಎಲಿಸ್ ರವರು ಸೌತಡ್ಕದಲ್ಲಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಮೇ 4 ರಂದು ಭೇಟಿ ನೀಡಿ ಸೇವಾಧಾಮದಲ್ಲಿ ನಡೆಯುತ್ತಿರುವ ವಿವಿಧ ಪುನಶ್ಚೇತನ ಹಾಗೂ ಕಾರ್ಯ ಚಟುವಟಿಕೆಗಳನ್ನು ವೀಕ್ಷಿಸಿ, ದಿವ್ಯಾಂಗರಿಗೆ ನೀಡಲಾಗುತ್ತಿರುವ ಸಮರ್ಪಿತ ಸೇವೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ಮೂಡಿಗೆರೆಯ 13 ವರ್ಷದ ಕುಮಾರಿ ನಿಶಿತಾ ಅವರ ಪುನಶ್ಚೇತನ ಹಾಗೂ ಶಿಕ್ಷಣ ವೆಚ್ಚಕ್ಕಾಗಿ ಶ್ರೀಮತಿ ದಿ ಎಲಿಸ್ ರವರು ರೂ. 65,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಇವರ ಈ ಉದಾರ ಸಹಾಯಕ್ಕಾಗಿ ಸೇವಾಧಾಮ ಸಂಸ್ಥೆಯು ಹೃತ್ಪೂರ್ವಕ ಕೃತಜ್ಞತೆಗಳನ್ನು ವ್ಯಕ್ತಪಡಿಸುತ್ತ ಅವರಿಗೆ ಮುಂದಿನ ಜೀವನದಲ್ಲಿ ಯಶಸ್ಸು, ಸಂತೋಷ ಹಾಗೂ ಉತ್ತಮ ಆರೋಗ್ಯ ಲಭಿಸಲಿ ಎಂದು ಹಾರೈಸುತ್ತೇವೆ.

## ಮಂಗಳೂರಿನ ಡಾ. ಸಾವಿತ್ರಿ ರೈ ಕೆ ರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ದೇಣಿಗೆ



**ಉಜಿರೆ (ಮೇ 12):** ಬೆಳ್ತಂಗಡಿ ತಾಲೂಕು ಮಹಿಳಾ ಸಹಕಾರಿ ಸಂಘ (ನಿ.), ಉಜಿರೆಯ ಅಧ್ಯಕ್ಷರಾದ ಡಾ ಸಾವಿತ್ರಿ ರೈ ಕೆ ರವರು ಸೇವಾಧಾಮ ಚಟುವಟಿಕೆಗಳಿಗೆ ರೂ. 5,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಈ ಸಹಾಯದಿಂದ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಜೀವನದಲ್ಲಿ ಆರೈಕೆ, ಪುನಶ್ಚೇತನ ಮತ್ತು ಹೊಸ ಆಶಾಕಿರಣ ಮೂಡಲಿದೆ. ಸೇವಾಭಾರತಿಯ ಟ್ರಸ್ಟಿ ಶ್ರೀಮತಿ ಸ್ವರ್ಣಗೌರಿ ಸಂಸ್ಥೆಯ ಹಾಗೂ ಫಲಾನುಭವಿಗಳ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಕೃತಜ್ಞತೆಗಳನ್ನು ಸಲ್ಲಿಸಿದರು.

## ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ವಸ್ತು ರೂಪದಲ್ಲಿ ದೇಣಿಗೆ




ಬೆಂಗಳೂರಿನ ಶ್ರೀ ಕೃಷ್ಣ ಪ್ರಕಾಶ್ ಎಸ್ ಹಾಗೂ ಶ್ರೀಮತಿ ಸುಷ್ಮ ರವರು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಒಂದು ಎಲೆಕ್ಟ್ರಿಕ್ ಕಾಟ್, ಸ್ವಯಂ ಆರೈಕೆ (Self Care) ಕಿಟ್‌ಗಳು ಹಾಗೂ ಅಟೆಂಡರ್ ಕಾಟ್ ಅನ್ನು ವಸ್ತು ರೂಪದಲ್ಲಿ ದೇಣಿಗೆಯಾಗಿ ನೀಡಿ ಸಹಕರಿಸಿದ್ದಾರೆ. ಕೇಂದ್ರದಲ್ಲಿ ಎಲೆಕ್ಟ್ರಿಕ್ ಕಾಟ್ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಹೆಚ್ಚು ಸಹಾಯಕವಾಗಿದ್ದು, ಅಟೆಂಡರ್ ಕಾಟ್ ಆರೈಕೆದಾರರ ಬಳಕೆಗೆ ಅನುಕೂಲಕರವಾಗಿದೆ. ಜೊತೆಗೆ ಸ್ವಯಂ ಆರೈಕೆ ಕಿಟ್‌ಗಳು ಫಲಾನುಭವಿಗಳ ದೈನಂದಿನ ಆರೈಕೆಗೆ ಸಹಕಾರಿಯಾಗಿವೆ. ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ಕಾರ್ಕಳದ ಶ್ರೀಮತಿ ಮಲ್ಲಿಕಾರವರಿಂದ ಸೇವಾಧಾಮ ಕಾರ್ಯಚಟುವಟಿಕೆಗಳಿಗೆ ರೂ. 1,000/- ದೇಣಿಗೆ



**ಸೌತಡ್ಕ (ಮೇ.19):** ಕಾರ್ಕಳದ ಶ್ರೀಮತಿ ಮಲ್ಲಿಕಾರವರು ಮೇ 19 ರಂದು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ರೂ. 1,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮದ ಫಿಸಿಯೋಥೆರಪಿಸ್ಟ್ ಕು. ವಿಖ್ಯಾತಿ ಮತ್ತು ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ಧನೇಂದ್ರ ರವರು ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

# ಸೇವಾನಿಕೇತನದಲ್ಲಿ ವಾರದ ಭಜನೆ




ಶ್ರೀ ದುರ್ಗಾ ಮಾತೃ ಮಂಡಳಿ,
ಕನ್ಯಾಡಿ - II



ಓಡಲ ಶಿವಪಾರ್ವತಿ ಮಹಿಳಾ ಭಜನಾ ಮಂಡಳಿ,
ಚಾಮುಂಡಿ ಬೆಟ್ಟ- ಉಜಿರೆ



ವನದುರ್ಗಾ ಬ್ರಾಹ್ಮಣ ಮಹಿಳಾ ಘಟಕ,
ಅಜಿತ್ ನಗರ - ಉಜಿರೆ



ಚಿರಂಜೀವಿ ಯುವಕ ಮಂಡಲ,
ಕಾನರ್ಪ

# ಪ್ರಕರ್ಶ ಅಕಾಡೆಮಿ ವತಿಯಿಂದ ಲೀಗಲ್ & ಕಂಪ್ಲೈನ್ಸ್ ವಿಶೇಷ ತರಬೇತಿ



ಬೆಂಗಳೂರಿನ ಪ್ರಕರ್ಶ ಅಕಾಡೆಮಿ ಸಂಸ್ಥೆಯು ಏಪ್ರಿಲ್ 10 ರಂದು ಆಯೋಜಿಸಿದ "ಲೀಗಲ್ ಮತ್ತು ಕಂಪ್ಲೈನ್ಸ್" ಕಾರ್ಯಾಗಾರದಲ್ಲಿ ಸೇವಾಭಾರತಿಯ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕರಾದ ಶ್ರೀ ಮೋಹನ್ ಎಸ್. ರವರು ಭಾಗವಹಿಸಿದ್ದರು.

ಈ ಕಾರ್ಯಾಗಾರವನ್ನು ಆದಾಯ ತೆರಿಗೆ ಕಾಯ್ದೆ 2025ರ ಅಡಿಯಲ್ಲಿ ಜಾರಿಗೊಂಡಿರುವ ಹೊಸ ನಿಬಂಧನೆಗಳು, ಆದಾಯ ತೆರಿಗೆ ನಿಯಮಗಳು 2026ರ ಅಡಿಯಲ್ಲಿ ಪರಿಚಯಿಸಲಾದ ಹೊಸ ನಿಯಮಗಳು ಮತ್ತು ನಮೂನೆಗಳು, ಐಟಿಆರ್ ಫಾರ್ಮ್–7 ಮೂಲಕ ತೆರಿಗೆ ರಿಟರ್ನ್ ಸಲ್ಲಿಕೆ ಪ್ರಕ್ರಿಯೆ ಹಾಗೂ ಆರ್ಥಿಕ ವರ್ಷ 2025-26ರ ಐಟಿ ಫೈಲಿಂಗ್ ಅವಶ್ಯಕತೆಗಳ ಕುರಿತು ಸಮಗ್ರ ಮಾಹಿತಿ ನೀಡುವ ಉದ್ದೇಶದಿಂದ ಆಯೋಜಿಸಲಾಗಿತ್ತು.

ಕಾರ್ಯಾಗಾರದಲ್ಲಿ ಕಾನೂನು ಮತ್ತು ಹಣಕಾಸು ಅನುಸರಣೆ ಕುರಿತ ಪ್ರಸ್ತುತ ನಿಯಮಾವಳಿಗಳ ಬಗ್ಗೆ ಸಂಪನ್ಮೂಲ ವ್ಯಕ್ತಿಗಳಿಂದ ವಿವರವಾದ ಮಾರ್ಗದರ್ಶನ ನೀಡಲಾಯಿತು. ಈ ತರಬೇತಿಯ ಮೂಲಕ ಸಂಸ್ಥೆಯ ಆಡಳಿತ ಮತ್ತು ಹಣಕಾಸು ನಿರ್ವಹಣೆಯಲ್ಲಿ ಅನುಸರಿಸಬೇಕಾದ ನವೀಕೃತ ಕ್ರಮಗಳ ಕುರಿತು ಸ್ಪಷ್ಟ ಅರಿವು ಮೂಡಿತು.

# ಸೇವಾಕಾರ್ಯಗಳ ಹಿನ್ನೋಟ

SEVA BHARATHI
सेवा ही परमो धर्मः

## SEVABHARATHI

**Sevabharathi Achievements in Nutshell**
**Up to 31 May 2026**

District Covered
(Dakshina Kannada, Udupi, Chikkamagalur, Shivamogga, Uttar Kannada, Kodagu)

| Services Provided - Sevadhama Program | Number |
|---|---|
| Identified People with Spinal Cord Injury | 833 |
| Rehabilitated People with Spinal Cord Injury (PwSCI) | 279 |
| **Medical Camps Held** (Belthangady, Puttur, Sullia, Ujire, Koppa, Moodbidri, Thumbe, Mangalore, Kundapura, Karkala , Mudigere, Kumta, Sirsi, Hassan, Sringeri, Madikeri, Tarikere and Udupi) | 31 |
| Wheelchairs Distributed | 438 |
| Calipers Provided | 64 |
| Walkers given | 90 |
| Home Accessibility like (Ramp, Toilets Provided) | 52 |
| Assistance for Self Employment | 140 |
| Medical Intervention | 326 |
| Surgical Assistance | 16 |
| Hospital Visited (Including PHC, CHC, THC ) | 163 |
| Panchayats Visited | 100 |
| Medical/Self-Care Kits Distributed | 1769 |
| Grocery kit distributed | 343 |
| Solar Inverter | 46 |
| BP/Diabetic Machines | 107 |
| Taluk Covered | 48 |
| **Services Provided - Arogyam Program** | **Number** |
| Blood Donation Camp Organized | 105 |
| Unit's collected | 11,399 |
| Ambulance services | 403 |
| **Services Provided - Sabalini Program** | **Number** |
| Tailoring Camp | 36 |
| Womens Empowered | 967 |

Sevadhama Premises provided Free by
Sri Mahaganapathy Seva Trust®, Southadka
Sevadhama Wound care and Rehabilitation center, Byndooru

# ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್ ವತಿಯಿಂದ Monitoring and Evaluation ಕಾರ್ಯಾಗಾರ



ಸ್ವಾಮಿ ವಿವೇಕಾನಂದ ಯೂತ್ ಮೂಮೆಂಟ್ ವತಿಯಿಂದ ಮೇ 09 ರಂದು "Monitoring and Evaluation of Health Programs" ವಿಷಯದ ಕುರಿತಾಗಿ ಒಂದು ದಿನದ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಈ ಕಾರ್ಯಾಗಾರದಲ್ಲಿ ಸೇವಾಭಾರತಿಯ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕರಾದ ಶ್ರೀ ಮೋಹನ್ ಎಸ್. ರವರು ಭಾಗವಹಿಸಿದ್ದರು.

ಕಾರ್ಯಾಗಾರದ ಮುಖ್ಯ ಉದ್ದೇಶ ಆರೋಗ್ಯ ಕಾರ್ಯಕ್ರಮಗಳ ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನದ ಕುರಿತಾಗಿ ಸಮಗ್ರ ಅರಿವು ಮೂಡಿಸುವುದಾಗಿತ್ತು. ಕಾರ್ಯಕ್ರಮದಲ್ಲಿ Monitoring & Evaluation (M&E) ಯ ಮೂಲಭೂತ ಅಂಶಗಳು, M&E Framework, Utilize Data Source, Participatory Monitoring ಹಾಗೂ Practical Exercises ಕುರಿತು ವಿವರವಾಗಿ ತಿಳಿಸಲಾಯಿತು.

ಕಾರ್ಯಾಗಾರದಲ್ಲಿ ವಿವಿಧ NGO ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿ ಮೇಲ್ವಿಚಾರಣೆ ಮತ್ತು ಮೌಲ್ಯಮಾಪನ ಕ್ರಮಗಳನ್ನು ಅನುಷ್ಠಾನಗೊಳಿಸುವ ಕುರಿತು ತಮ್ಮ ಅನುಭವಗಳನ್ನು ಹಂಚಿಕೊಂಡರು.ಈ ತರಬೇತಿ ಕಾರ್ಯಕ್ರಮವು ಡೇಟಾ ಆಧಾರಿತ ಕಾರ್ಯಪದ್ಧತಿಗಳ ಮಹತ್ವವನ್ನು ಅರಿಯಲು ಸಹಕಾರಿಯಾಯಿತು.

## ಸೇವಾನಿಧಿ ದಾನಿಗಳು

- ಶ್ರೀ ಕೃಷ್ಣಮೂರ್ತಿ ರಾವ್, ಕನ್ಯಾಡಿ
- ಶ್ರೀ ವಿಘ್ನೇಶ್ ಕುಡ್ವ, ಉಜಿರೆ
- ಶ್ರೀ ರಾಜಾರಾಮ್ ಕಾರಂತ್, ಬೆಂಗಳೂರು
- ಶ್ರೀ ಬಾಲಕೃಷ್ಣ ರಾವ್, ಕನ್ಯಾಡಿ
- ಶ್ರೀ ಯು ರಮೇಶ್ ಪ್ರಭು, ಉಜಿರೆ
- ಶ್ರೀಮತಿ ಸ್ವರ್ಣಗೌರಿ, ಜೋಡುಸ್ಥಾನ
- ಶ್ರೀ ರಾಘವೇಂದ್ರ ಶಾಸ್ತ್ರೀ, ಧರ್ಮಸ್ಥಳ
- ಶ್ರೀ ಪುರುಷೋತ್ತಮ್ ಡಿ ಎ, ಧರ್ಮಸ್ಥಳ
- ಶ್ರೀ ಅಣ್ಣು ದೇವಾಡಿಗ, ನೇತ್ರಾವತಿ
- ಶ್ರೀ ಪ್ರಜ್ವಲ್ ಜೆ, ದೊಂಡೋಲೆ
- ಶ್ರೀ ಗಣೇಶ್ ಭಟ್, ಉಜಿರೆ
- ಶ್ರೀ ಕೆ ಪುರಂದರ ರಾವ್, ನಾರ್ಯ
- ಶ್ರೀ ಅಖಿಲೇಶ್ ಕೆ ಎಲ್, ಪುತ್ತೂರು
- ಬೇಬಿ ವಿಹಾನ ಎಂ ಎಂ, ನಿಡ್ಲೆ
- ಶ್ರೀ ಸುರೇಂದ್ರ ಕುಡ್ವ, ಉಜಿರೆ
- ಶ್ರೀ ಡಿ ಎನ್ ಗಿರೀಶ್, ಧರ್ಮಸ್ಥಳ
- ಶ್ರೀ ಬಿ ರಾಮದಾಸ್ ಭಂಡಾರ್ಕರ್, ಉಜಿರೆ
- ಶ್ರೀ ಕೆ ವಿನಾಯಕ ರಾವ್, ಕನ್ಯಾಡಿ
- ಶ್ರೀ ಗೌರಿಶಂಕರ್ ರಾವ್, ಜೋಡುಸ್ಥಾನ
- ಶ್ರೀಮತಿ ಜಯಂತಿ ಪುರಂದರ, ನಾರ್ಯ
- ಶ್ರೀಮತಿ ದಿವ್ಯಾ ಪುರಂದರ, ಬೆಂಗಳೂರು
- ಶ್ರೀ ಕೆ ರಮೇಶ್ ಪೂಜಾರಿ, ಕನ್ಯಾಡಿ
- ಶ್ರೀ ದಿವಾಕರ್ ರಾವ್, ಕನ್ಯಾಡಿ
- ಶ್ರೀ ಸುಧಾಕರ್ ಪ್ರಭು, ಉಡುಪಿ
- ಶ್ರೀ ನೀಲಕಂಠ, ನಾರ್ಯ
- ಶ್ರೀ ಚೆನ್ನಕೇಶವ, ಕಡಿರುದ್ಯಾವರ
- ಶ್ರೀ ಪ್ರೀಜೇಶ್, ಧರ್ಮಸ್ಥಳ
- ಶ್ರೀ ಗುರುರಾಜ, ಬೈಂದೂರು
- ಶ್ರೀ ಮಧುಸೂಧನ್, ಉಜಿರೆ
- ಶ್ರೀ ಶಿವಕುಮಾರ್, ಉಜಿರೆ
- ಶ್ರೀ ಸಂತೋಷ್ ಕೆ, ಕೊಕ್ಕಡ
- ಶ್ರೀ ನಿತಿನ್, ಉಜಿರೆ
- ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಉಡುಪಿ
- ಶ್ರೀ ಗಣೇಶ್ ಶೆಟ್ಟಿ, ಮದ್ದಡ್ಕ
- ಶ್ರೀ ಜಿ ಪುಟ್ಟಸ್ವಾಮಿ, ಉಜಿರೆ
- ಬೇಬಿ ಶ್ರೀ ಬಿಲ್ವಾನಿ, ಉಜಿರೆ
- ಶ್ರೀ ದೀಕ್ಷಿತ್ ಎಮ್, ನಿಡ್ಲೆ
- ಶ್ರೀ ಬಿ ಪುರಂದರ, ಧರ್ಮಸ್ಥಳ
- ಶ್ರೀ ರಜತ್ ಕುಮಾರ್ ಜೆ ಡಿ, ವೇಣೂರು
- ಶ್ರೀ ರಕ್ಷಿತ್ ಎಸ್ ಕುಲಾಲ್, ಬಡಗಕಾರಂದೂರು
- ಶ್ರೀ ಜಯಾನಂದ ಎಮ್, ಕನ್ಯಾಡಿ
- ಶ್ರೀ ಸುನಿಲ್ ಪಿ ಎನ್, ಕನ್ಯಾಡಿ

## ಮಹನೀಯ ದಾನಿಗಳು

- ಶ್ರೀ ಅರ್ಚನಾ ಚೇತನ್, ಬೆಂಗಳೂರು
- ಶ್ರೀಮತಿ ಮಾಳವಿಕಾ, ಬೆಂಗಳೂರು
- ಶ್ರೀಮತಿ ರವಿಜಾ ಎಸ್ ರಾವ್, ಕನ್ಯಾಡಿ
- ಶ್ರೀ ಪ್ರಜ್ವಲ್, ತೆಂಕಕಜೆಕಾರ್
- ಶ್ರೀ ಶಂಕರ್ ಗೌಡ ಎಮ್ ಪಾಟೀಲ್, ಬಾಗಲಕೋಟ
- ಶ್ರೀ ಸುಬೆಂದು ಕುಮಾರ್ ಮೋಹಪತ್ರ,ವೈಟ್ ಫೀಲ್ಡ್
- ಶ್ರೀಮತಿ ಮಂಜುಳಾ ಊತಪ್ಪ, ಬೆಂಗಳೂರು
- ಶ್ರೀಮತಿ ಪ್ರಮೀಳಾ, ಚಿಕ್ಕಮಗಳೂರು
- ಶ್ರೀಮತಿ ವಂದನಾ ರಾವ್, ಧರ್ಮಸ್ಥಳ
- ಶ್ರೀ ಗೌರಿಶಂಕರ್ ರಾವ್, ಜೋಡುಸ್ಥಾನ
- ಶ್ರೀ ಕೃಷ್ಣಮೂರ್ತಿ ರಾವ್, ಕನ್ಯಾಡಿ
- ಕು ಶ್ವೇತಾ ಡಿ ಜಿ, ಬೆಂಗಳೂರು
- ಶ್ರೀ ಎಚ್ ದೇವದಾಸ್ ಪೈ, ಉಡುಪಿ
- ಶ್ರೀ ಹರೀಶ್ ಗಂಭೀರ್, ಬೆಂಗಳೂರು
- ಶ್ರೀ ಎಚ್ ರಾಮಚಂದ್ರ ಕಾಮತ್, ಉಡುಪಿ
- ಡಾ. ಎ ಜಯಕುಮಾರ್ ಶೆಟ್ಟಿ, ಮಂಗಳೂರು
- ಡಾ ಸಾವಿತ್ರಿ ರೈ ಕೆ, ಮಂಗಳೂರು
- ಶ್ರೀ ಚಂದ್ರಕಾಂತ್ ಗೋರೆ, ಸುಲ್ಕೇರಿ
- ಶ್ರೀ ವಸಂತ ಭಟ್, ಉಡುಪಿ
- ಶ್ರೀ ಕೃಷ್ಣ ಎನ್ ಪೈ, ಉಡುಪಿ
- ಶ್ರೀ ರಂಜಿತ್ ಕುಮಾರ್, ಪಟ್ಟೂರು
- ಶ್ರೀಮತಿ ಮಲ್ಲಿಕಾ, ಕಾರ್ಕಳ
- ಶ್ರೀ ರಾಜೀವ್ ಬಿ, ಬೆಂಗಳೂರು
- ಶಕ್ತಿ ಕೇಂದ್ರ ಅಭಿಮಾನಿ ಬಳಗ, ಗುಜ್ಜಾಡಿ
- ಶ್ರೀ ಅಖಿಲೇಶ್ ಎಸ್, ಬಾಳೆಹೊನ್ನೂರು
- ಶ್ರೀಮತಿ ಜ್ಯೋತ್ಸ್ನ ಅಡಿಗ, ಉಡುಪಿ
- ಶ್ರೀಮತಿ ರಜನಿ ಬಿ, ಬೆಂಗಳೂರು
- ಶ್ರೀ ಎಚ್ ಹರಿರಾಮ್ ಶೆಣೈ, ಉಡುಪಿ
- ಶ್ರೀಮತಿ ಜೋಸ್ಫಿನಾ ಪಿ ಟಿ, ಬೆಳ್ತಂಗಡಿ
- ಶ್ರೀ ವರುಣ್ , ಉಳ್ಳಾಲ್
- ಶ್ರೀ ಹರೀಶ್ ಕುಮಾರ್, ಮಂಗಳೂರು
- ಶ್ರೀಮತಿ ವಿಶಾಲ ಕುಮಾರಿ, ಬೆಂಗಳೂರು
- ಶ್ರೀ ರಾಜೇಂದ್ರ ಅಜ್ರಿ, ಕನ್ಯಾಡಿ
- ಶ್ರೀ ಭವಿತ್ ಎ, ಬೆಂಗಳೂರು
- ಶ್ರೀಮತಿ ಮಾನಸ ಶೀತಲ್, ಶಿರ್ಲಾಲು
- ಶ್ರೀಮತಿ ಮಮತಾ ವಿಶ್ವನಾಥ್, ಅಮೆರಿಕಾ
- ಶ್ರೀ ರಾಮದಾಸ್ ಉಡುಪ, ಉಡುಪಿ
- ಶ್ರೀ ಲಕ್ಷ್ಮೀನಾರಾಯಣ ರಾವ್, ಜೋಡುಸ್ಥಾನ
- ಶ್ರೀ ಯು ಪಾಂಡುರಂಗ ಪಡಿಯಾರ್, ಉಪ್ಪುಂದ
- ಭಜೋರೇ ಮಾರುತಿ ಕುಣಿತ ಭಜನಾ ತರಬೇತುದಾರರ ತಂಡ, ಬೆಳ್ತಂಗಡಿ

## ಸಂಘ ಸಂಸ್ಥೆಗಳು

- ನಿಯೋ ಮೋಶನ್ ಅಸಿಸ್ಟಿವ್ ಸೊಲ್ಯೂಶನ್ಸ್ ಪ್ರೈವೇಟ್ ಲಿಮಿಟೆಡ್, ತಮಿಳುನಾಡು
- ಟೆಕ್ನೋ ಹೆಲ್ತ್ ಕೇರ್, ಮಂಗಳೂರು
- SJF Philanthropic Organisation, Bangalore

## ವಸ್ತು ರೂಪದಲ್ಲಿ ದೇಣಿಗೆ

- ಅಮೃತ ಶಿಶು ನಿವಾಸ, ಬೆಂಗಳೂರು
- ಕು ನಿಶಿತಾ, ಮೂಡಿಗೆರೆ
- ಹವ್ಯಕ ವಲಯ, ಉಜಿರೆ
- ಶ್ರೀ ಹರ್ಷ, ಮೂಡಿಗೆರೆ
- ಶ್ರೀ ಪ್ರಕಾಶ್ ಎಸ್, ಬೆಂಗಳೂರು

## ಸೇವಾಧಾಮದ ಮೇ ತಿಂಗಳ ಸೇವಾಕಾರ್ಯಗಳು

- **ಸೆಲ್ಫ್ ಕೇರ್ ಕಿಟ್ ಮತ್ತು ಮೆಡಿಕಲ್ ಕಿಟ್ - 50**
- **ಗಾಲಿಕುರ್ಚಿ ವಿತರಣೆ - 3**
- **ಹೊಸ ಗುರುತಿಸುವಿಕೆ - 3**
- **ಕೇಂದ್ರದಲ್ಲಿ ಪುನಶ್ಚೇತನ ಪಡೆದುಕೊಳ್ಳುತ್ತಿರುವ ಸನಿವಾಸಿಗಳು =**
  **ಸೌತಡ್ಕ ಸೇವಾಧಾಮ - 10**
  **ಬೈಂದೂರು ಸೇವಾಧಾಮ - 05**






ಸಂಸ್ಥೆಯ ಅಧ್ಯಕ್ಷರಾದ ಶ್ರೀ ಕೆ ವಿನಾಯಕ ರಾವ್ ರವರು ಬೈಂದೂರು ಒತ್ತಡಗಾಯ ನಿರ್ವಹಣಾ ಮತ್ತು ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಭೇಟಿ ನೀಡಿ ಅಲ್ಲಿನ ಸನಿವಾಸಿಗಳೊಂದಿಗೆ ಆತ್ಮೀಯವಾಗಿ ಸಂವಾದ ನಡೆಸಿ ಆರೋಗ್ಯದ ಬಗ್ಗೆ ಮಾಹಿತಿ ಹಾಗೂ ಜಾಗೃತಿ ನೀಡಿದರು.

## ಬೆಂಗಳೂರಿನ ಪ್ರಜ್ವಲ್ ಉಡುಪ ರವರಿಂದ ಸೇವಾಧಾಮಕ್ಕೆ ಒಂದು ದಿನದ ಊಟಕ್ಕಾಗಿ ದೇಣಿಗೆ



ಬೆಂಗಳೂರಿನ ಶ್ರೀ ಪ್ರಜ್ವಲ್ ಉಡುಪ ಹಾಗೂ ಶ್ರೀಮತಿ ರಚಿತಾ ರಾವ್ ರವರು ತಮ್ಮ ಮನೆಯ ಗೃಹಪ್ರವೇಶದ ಸಂದರ್ಭದಲ್ಲಿ ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಒಂದು ದಿನದ ಊಟಕ್ಕಾಗಿ ರೂ. 11,500/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ.

ಸಂಸ್ಥೆಯ ವತಿಯಿಂದ ಶ್ರೀ ಪ್ರಜ್ವಲ್ ಹಾಗೂ ಶ್ರೀಮತಿ ರಚಿತಾ ರಾವ್ ದಂಪತಿಗಳಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಲಾಯಿತು. ಅವರ ಕುಟುಂಬಕ್ಕೆ ಶುಭವಾಗಲಿ ಹಾಗೆ ನಿಮ್ಮ ಜೀವನ ಸದಾ ಆರೋಗ್ಯ, ಸಂತೋಷ, ಶಾಂತಿ ಮತ್ತು ಸಮೃದ್ಧಿಯಿಂದ ಕೂಡಿರಲಿ ಎಂದು ಹಾರೈಸುತ್ತೇವೆ.

## ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆಯಿಂದ ಸೇವಾಧಾಮದ ಕಾರ್ಯ ಚಟುವಟಿಕೆಗಳಿಗೆ ದೇಣಿಗೆ



**ಉಡುಪಿ (ಮೇ 30):** ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆಯ ಅಧ್ಯಕ್ಷರಾದ ಶ್ರೀ ಕೃಷ್ಣದಾಸ್ ಸಿ.ಪಿ. ಅವರು ಸದಸ್ಯರಿಂದ ಸಂಗ್ರಹಿಸಲಾದ ₹68,000 ದೇಣಿಗೆಯನ್ನು ಕನ್ಯಾಡಿ ಸೇವಾಭಾರತಿಯ ಕಾರ್ಯದರ್ಶಿಯಾದ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಅವರಿಗೆ ಹಸ್ತಾಂತರಿಸಿದರು. ದೇಣಿಗೆಯನ್ನು ಸ್ವೀಕರಿಸಿ ಹಿಂದಿನ ವರ್ಷಗಳಲ್ಲಿ ಭಾರ್ಗವ ಶಾಖೆಯಿಂದ ನೀಡಲಾದ ಸಹಕಾರವನ್ನು ಸ್ಮರಿಸಿದರು. 2023-24ನೇ ಸಾಲಿನಲ್ಲಿ ₹1,20,000 ಹಾಗೂ 2024-25ನೇ ಸಾಲಿನಲ್ಲಿ ₹50,000 ದೇಣಿಗೆ ನೀಡಲಾಗಿದ್ದು, ಈ ವರ್ಷವೂ ಸೇವಾಧಾಮದ ಕಾರ್ಯಚಟುವಟಿಕೆಗಳಿಗೆ ನಿರಂತರ ಸಹಕಾರ ನೀಡುತ್ತಿರುವ ಭಾರ್ಗವ ಶಾಖೆಯ ಸದಸ್ಯರಿಗೆ ಸಂಸ್ಥೆಯ ಪರವಾಗಿ ಕೃತಜ್ಞತೆ ಸಲ್ಲಿಸಿದರು. ಮುಂದೆಯೂ ಸಹಕಾರ ನೀಡುವುದಾಗಿ ಭರವಸೆ ನೀಡಿದ್ದಾರೆ.

ಈ ಸಂದರ್ಭದಲ್ಲಿ ಭಾರ್ಗವ ಶಾಖೆಯ ಕಾರ್ಯದರ್ಶಿ ಶ್ರೀ ಸುಧೀಂದ್ರ ಭಂಡಾರಿ, ಸಂಚಾಲಕ ಶ್ರೀ ಪಿ. ವಸಂತ ಭಟ್, ಶ್ರೀಮತಿ ಜಯಲಕ್ಷ್ಮೀ ಕೃಷ್ಣದಾಸ್, ಕೋಶಾಧಿಕಾರಿ ಶ್ರೀ ಎನ್. ಕೃಷ್ಣ ಪೈ, ಭಾರ್ಗವ ಶಾಖೆಯ ಸದಸ್ಯರು ಹಾಗೂ ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಉಪಸ್ಥಿತರಿದ್ದರು.

## ಬೈಂದೂರು ಮತ್ತು ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರದಲ್ಲಿ ಪುನಶ್ಚೇತನವನ್ನು ಪಡೆದುಕೊಂಡು ಮೇ ತಿಂಗಳಲ್ಲಿ ಡಿಸ್ಚಾರ್ಜ್ ಆದವರು




ಶ್ರೀ ಸಂದೀಶ್, ಕಾರ್ಕಳ




ಕು. ನಿಶಿತಾ, ಮೂಡಿಗೆರೆ




ಶ್ರೀ ಗಿರೀಶ್, ದಾವಣಗೆರೆ





ಶ್ರೀ ಗಣಪತಿ ಗೊಂಡ, ಕುಂದಾಪುರ

## ಬೆಂಗಳೂರಿನ ಬೇಬಿ ಇಲಾ ಹುಟ್ಟುಹಬ್ಬದ ಪ್ರಯುಕ್ತ ಸೇವಾಧಾಮಕ್ಕೆ ರೂ.10,000 ದೇಣಿಗೆ




**ಬೈಂದೂರು (ಮೇ 25):** ಬೆಂಗಳೂರಿನ ಶ್ರೀ ದೀಪಕ್ ಹಾಗೂ ಅವರ ಕುಟುಂಬಸ್ಥರು ಬೈಂದೂರು ಸೇವಾಧಾಮ ಒತ್ತಡಗಾಯ ನಿರ್ವಹಣೆ ಮತ್ತು ಪುನಶ್ಚೇತನ ಕೇಂದ್ರಕ್ಕೆ ಮೇ 25ರಂದು ಭೇಟಿ ನೀಡಿ, ತಮ್ಮ ಕಿರಿಯ ಮಗಳಾದ ಬೇಬಿ ಇಲಾ ರವರ ಹುಟ್ಟುಹಬ್ಬದ ಪ್ರಯುಕ್ತ ಬೈಂದೂರು ಸೇವಾಧಾಮದ ಫಿಸಿಯೋಥೆರಪಿ ಉಪಕರಣಗಳಿಗಾಗಿ ರೂ.10,000 ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮದ ಪುನಶ್ಚೇತನ ಕಾರ್ಯಗಳಿಗೆ ಇಂತಹ ದೇಣಿಗೆಗಳು ಮಹತ್ತರ ನೆರವಾಗುತ್ತಿದ್ದು, ಸಮಾಜಮುಖಿ ಮನೋಭಾವದಿಂದ ನೀಡಿದ ಈ ಸಹಕಾರಕ್ಕಾಗಿ ಸಂಸ್ಥೆಯ ಪರವಾಗಿ ಸಿಬ್ಬಂದಿ ವರ್ಗದವರು ದೇಣಿಗೆಯನ್ನು ಸ್ವೀಕರಿಸಿ ಶ್ರೀ ದೀಪಕ್ ಹಾಗೂ ಅವರ ಕುಟುಂಬಸ್ಥರಿಗೆ ಹೃತ್ಪೂರ್ವಕ ಧನ್ಯವಾದಗಳನ್ನು ಸಲ್ಲಿಸಲಾಯಿತು.

## ಪಟ್ರಮೆಯ ಶ್ರೀ ರಂಜಿತ್ ಕುಮಾರ್ ರವರಿಂದ ಸೇವಾಧಾಮದ ಒಂದು ಹೊತ್ತಿನ ಊಟಕ್ಕಾಗಿ ರೂ. 3,000/- ದೇಣಿಗೆ :



**ಸೌತಡ್ಕ (ಮೇ:26)** ಬೆಳ್ತಂಗಡಿ ತಾಲೂಕಿನ ಪಟ್ರಮೆ ನಿವಾಸಿ ಶ್ರೀ ರಂಜಿತ್ ಕುಮಾರ್ ರವರು ತಮ್ಮ ಹುಟ್ಟು ಹಬ್ಬದ ಪ್ರಯುಕ್ತ ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಒಂದು ಹೊತ್ತಿನ ಊಟಕ್ಕಾಗಿ ರೂ. 3,000/- ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸೇವಾಧಾಮದ ಅಸಿಸ್ಟೆಂಟ್ ಥೆರಪಿಸ್ಟ್ ಶ್ರೀ ಧನೇಂದ್ರ ರವರು ದೇಣಿಗೆಯನ್ನು ಸ್ವೀಕರಿಸಿ, ಸಂಸ್ಥೆಯ ಪರವಾಗಿ ಶುಭಹಾರೈಸಿ ಧನ್ಯವಾದವಿತ್ತರು.

## ಸೇವಾಭಾರತಿ ತಂಡದಿಂದ ಪಡುಬಿದ್ರಿ ಸೊಸೈಟಿಯ ಅಧ್ಯಕ್ಷರ ಭೇಟಿ



ಪಡುಬಿದ್ರಿ ಸಹಕಾರಿ ವ್ಯವಸಾಯಿಕ ಸೊಸೈಟಿ (ನಿ.) ಅಧ್ಯಕ್ಷರಾದ ಶ್ರೀ ವೈ ಸುಧೀರ್ ಕುಮಾರ್ ರವರನ್ನು ಸೇವಾಭಾರತಿ ತಂಡ ಮೇ 25 ರಂದು ಭೇಟಿ ಮಾಡಿ ಈ ಹಿಂದೆ ಸೇವಾಧಾಮದ ಸೇವಾಕಾರ್ಯಗಳಿಗೆ ದೇಣಿಗೆಯ ಮೂಲಕ ಸಹಕರಿಸಿದ್ದಕ್ಕಾಗಿ ಶ್ರೀಯುತರಿಗೆ ಹಾಗೂ ಅವರ ತಂಡಕ್ಕೆ ಸೇವಾಭಾರತಿ ವತಿಯಿಂದ ಹೃತ್ಪೂರ್ವಕ ಕೃತಜ್ಞತೆ ಸಲ್ಲಿಸಲಾಯಿತು. ಅವರ ಸಹಕಾರವು ಸೇವಾಧಾಮದ ಸೇವಾಚಟುವಟಿಕೆಗಳಿಗೆ ಮತ್ತಷ್ಟು ಪ್ರೇರಣೆ ಹಾಗೂ ಬಲವನ್ನು ನೀಡುತ್ತಿದೆ ಎಂದು ವ್ಯಕ್ತಪಡಿಸಲಾಯಿತು. ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಕಾರ್ಯದರ್ಶಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ, ಉಡುಪಿ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಮನೋಜ್ ಹಾಗೂ ಸ್ವಯಂಸೇವಕರಾದ ಶ್ರೀ ರಾಜೇಂದ್ರ ಗುಡಿಗಾರ್ ರವರು ಉಪಸ್ಥಿತರಿದ್ದರು.

## ಸೇವಾಭಾರತಿ ತಂಡದಿಂದ ಸಮಾಜ ಸೇವಕರಾದ ಶ್ರೀ ತಾರಾನಾಥ ಕೊಡವೂರು ರವರ ಭೇಟಿ



ಸಮಾಜ ಸೇವಕರಾದ ಶ್ರೀ ತಾರಾನಾಥ ಕೊಡವೂರು ರವರನ್ನು ಸೇವಾಭಾರತಿ ತಂಡ ಮೇ 25 ರಂದು ಭೇಟಿ ಮಾಡಿ ಸೇವಾಧಾಮದ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಕನ್ಯಾಡಿಯಲ್ಲಿ ನಿರ್ಮಾಣವಾಗುತ್ತಿರುವ ನೂತನ ಪುನಶ್ಚೇತನ ಕೇಂದ್ರದ ಕಟ್ಟಡದ ಕುರಿತು ಪ್ರಸ್ತಾಪಿಸಿ ಸಹಕರಿಸುವಂತೆ ಮನವಿ ಮಾಡಲಾಯಿತು. ಈ ಸಂದರ್ಭದಲ್ಲಿ ಸೇವಾಭಾರತಿ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ ವಿನಾಯಕ ರಾವ್, ಕಾರ್ಯದರ್ಶಿ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ, ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ, ಉಡುಪಿ ಜಿಲ್ಲೆಯ ಕ್ಷೇತ್ರ ಸಂಯೋಜಕರಾದ ಶ್ರೀ ಮನೋಜ್ ಹಾಗೂ ಸ್ವಯಂಸೇವಕರಾದ ಶ್ರೀ ರಾಜೇಂದ್ರ ಗುಡಿಗಾರ್ ರವರು ಉಪಸ್ಥಿತರಿದ್ದರು.

# ಸೇವಾಧಾಮ ಪುನಶ್ಚೇತನ ಕೇಂದ್ರದ ನೂತನ ಕಟ್ಟಡಕ್ಕೆ ಧನಸಹಾಯ ನೀಡುವಂತೆ ಮನವಿ





**ಮೊದಲನೇ ಮಹಡಿಯ ಸ್ಟ್ರಕ್ಚರಲ್ ಕಾಮಗಾರಿ ಪೂರ್ಣಗೊಂಡಿದ್ದು, ವೈರಿಂಗ್ ಹಾಗೂ ಪ್ಲಾಸ್ಟರಿಂಗ್ ಕೆಲಸಗಳು ಪ್ರಗತಿಯಲ್ಲಿವೆ. ಜೊತೆಗೆ ಎರಡನೇ ಮಹಡಿಯ ಕಾಮಗಾರಿಯೂ ಪ್ರಾರಂಭಗೊಂಡಿದ್ದು, ಸ್ಟೇರ್‌ಕೇಸ್, ಪಿಲ್ಲರ್ ಹಾಗೂ ರ್‍ಯಾಂಪ್ ಕಾಮಗಾರಿಗಳು ಹಾಗೂ ಸ್ಲ್ಯಾಬ್ ಕಾಂಕ್ರಿಟ್ ಪೂರ್ಣಗೊಂಡಿದೆ. ಇದುವರೆಗೆ ಒಟ್ಟು ರೂ. 2,08,84,457/- ವೆಚ್ಚವಾಗಿದ್ದು, ಇನ್ನೂ ಮೂರು ಮಹಡಿಗಳ ಕಾಮಗಾರಿ ಪೂರ್ಣಗೊಳ್ಳಬೇಕಿದೆ. ಮುಂದಿನ ಹಂತದ ಕಾಮಗಾರಿಯನ್ನು ಮುಂದುವರಿಸಲು ನಿಧಿಯ ಅವಶ್ಯಕತೆ ಇದ್ದು, ದಾನಿಗಳ ಸಹಕಾರವನ್ನು ನಾವು ನಿರೀಕ್ಷಿಸುತ್ತಿದ್ದೇವೆ."**

ಸೇವಾಭಾರತಿ ಸಂಸ್ಥೆಯು ಕಳೆದ 21 ವರ್ಷಗಳಲ್ಲಿ ಸಾಮಾಜಿಕವಾಗಿ ಅನೇಕ ಕ್ಷೇತ್ರಗಳಲ್ಲಿ ಸೇವಾ ಕಾರ್ಯಗಳನ್ನು ಮಾಡುತ್ತ ಬರುತ್ತಿದ್ದು, ಸಬಲಿನಿ ಯೋಜನೆಯಡಿ ಮಹಿಳೆಯರ ಆರ್ಥಿಕ ಸಬಲಿಕರಣಕ್ಕಾಗಿ ಉಚಿತ ಟೈಲರಿಂಗ್ ತರಬೇತಿಗಳು, ಆರೋಗ್ಯಮ್ ಯೋಜನೆಯಡಿ ಆಂಬುಲೆನ್ಸ್ ಸೇವೆ ಹಾಗೂ ರಕ್ತದಾನ ಶಿಬಿರಗಳು, ಸೇವಾಧಾಮ ಯೋಜನೆ ಯಡಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗಾಗಿ ಪುನಶ್ವೇತನ ಕೇಂದ್ರ, ಈ ಮೂರು ಯೋಜನೆಗಳು ಯಶಸ್ವಿಯಾಗಿ ನಡೆಯುತ್ತಿದೆ.

ನಮ್ಮ ಸಂಸ್ಥೆಯ ಸಮಾಜಮುಖಿ ಚಟುವಟಿಕೆಗಳನ್ನು ಉತ್ತೇಜಿಸುವ ದೃಷ್ಟಿಯಿಂದ ಕನ್ಯಾಡಿಯಲ್ಲಿ 2023ನೇ ವರ್ಷದಲ್ಲಿ ಸರ್ಕಾರವು ಒಟ್ಟು 10 ಸೆಂಟ್ಸ್ ಜಮೀನನ್ನು ನಮ್ಮ ಸಂಸ್ಥೆಯ ಕಟ್ಟಡ ನಿರ್ಮಾಣ ಉದ್ದೇಶಕ್ಕಾಗಿ ಮಂಜೂರುಗೊಳಿಸಿದೆ. 2025 ರಲ್ಲಿ ಸೇವಾಭಾರತಿಯ ಕಾರ್ಯಚಟುವಟಿಕೆಗಳಿಗೆ ಹಾಗೂ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ಪುನಶ್ಚೇತನ ಕೇಂದ್ರದ ಉದ್ದೇಶಕ್ಕಾಗಿ ಕಟ್ಟಡ ನಿರ್ಮಾಣಕ್ಕೆ ಮುಂದಾಗಿದ್ದೇವೆ. ಅಲ್ಲದೆ ಧನಸಹಾಯ ನೀಡುವಂತೆ ಬೇರೆ ಬೇರೆ ಸಂಸ್ಥೆಗಳಿಗೆ ಮನವಿಯನ್ನೂ ಮಾಡಿದ್ದೇವೆ. ಈ ಮನವಿಗೆ ಸ್ಪಂದಿಸಿ ನೆಲಮಹಡಿಗೆ Mangalore Refinery and Petrochemicals Limited (MRPL) ನಿಂದ ರೂ. 42 ಲಕ್ಷ ಮಂಜೂರಾಗಿ ಅದರಲ್ಲಿ ನೆಲಮಹಡಿಯ ಕಟ್ಟಡದ ನಿರ್ಮಾಣ ಸಂಪೂರ್ಣವಾಗಿ ಪೂರ್ಣಗೊಂಡು ಉದ್ಘಾಟನೆ ಆಗಿದೆ., ಹಾಗೂ NMPA CSR ಅನುದಾನದ ಅಡಿಯಲ್ಲಿ ಮೊದಲ ಮಹಡಿಯ ಪಿಲ್ಲರ್ ಹಾಗೂ ಸ್ಲ್ಯಾಬ್ ಕಾಮಗಾರಿ ಸಂಪೂರ್ಣವಾಗಿ ಪೂರ್ಣಗೊಂಡಿದ್ದು. LIC ಯ ರೂ. 40 ಲಕ್ಷ ಮಂಜೂರುಗೊಂಡಿರುವ ಕಾರಣ ಅತೀ ಶೀಘ್ರದಲ್ಲಿ ಈ ಮಹಡಿ ನಿರ್ಮಾಣಗೊಳ್ಳಲಿದೆ. ಪ್ರಸ್ತುತ ಇದೀಗ, ಎರಡನೇ ಮಹಡಿಯ ಕಾಮಗಾರಿ ಪ್ರಾರಂಭವಾಗಿದೆ.

ಬೇರೆ ಬೇರೆ CSR, ದಾನಿಗಳಿಗೆ, ಸಂಘ ಸಂಸ್ಥೆಗಳಿಗೆ ಸಹಕಾರವನ್ನು ಅಪೇಕ್ಷಿಸುತಿದ್ದೇವೆ. ನಿಯೋಜಿತ ಕಟ್ಟಡದಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದವರಿಗೆ ಉತ್ತಮ ಪುನಶ್ಚೇತನಕಾಗಿ ಫಿಸಿಯೋಥೆರಪಿ ವಾರ್ಡ್ ಕೇಂದ್ರಾಧಾರಿತ ಸೇವೆಗಾಗಿ ವಸತಿ (12 ಮಂದಿ ಮತ್ತು ಆರೈಕೆದಾರರಿಗೆ ಉಳಿಯುವಂತ ವ್ಯವಸ್ಥೆ), ಅಡುಗೆ ಮತ್ತು ಊಟದ ಹಾಲ್ ದಿವ್ಯಾಂಗರಿಗೆ ಅನೇಕ ರೀತಿಯ ತರಬೇತಿ ವೈದ್ಯಕೀಯ ತಪಾಸಣೆಗಾಗಿ ಬಹು ಉದ್ದೇಶಿತ ಸಭಾಂಗಣ ಮತ್ತು ಪ್ರಧಾನ ಕಚೇರಿ ಹೊಂದಿರುವ ಈ ಕಟ್ಟಡ ಸಂಪೂರ್ಣ ದಿವ್ಯಾಂಗ ಸ್ನೇಹಿಯಾಗಿ ನಿರ್ಮಾಣವಾಗಲಿದೆ. ಈ ಕಟ್ಟಡ ಪೂರ್ತಿ ನಿರ್ಮಾಣವಾದಲ್ಲಿ ಕರ್ನಾಟಕದಾದ್ಯಂತ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಉತ್ತಮ ಸೇವೆಯನ್ನು ನೀಡುವ ಪುನಶ್ಚೇತನ ಕೇಂದ್ರವಾಗುತ್ತದೆ.

ಈವರೆಗೂ ತಾವು ನಮ್ಮ ಎಲ್ಲಾ ಯೋಜನೆಗಳಿಗೂ ಕೈಲಾದಷ್ಟು ಸಹಾಯ ನೀಡುತ್ತಿದ್ದು, ಈ ಬಾರಿ ಈ ಕಟ್ಟಡ ಕಟ್ಟಲು ಸಹಾಯ ನೀಡುವಿರೆಂದು ಭಾವಿಸಿದ್ದೇವೆ. ಈ ಕಟ್ಟಡವು ನಿರ್ಮಾಣಗೊಂಡು ಕಾರ್ಯಾಚರಿಸಲು ಪ್ರಾರಂಭಿಸಿದ್ದಲ್ಲಿ ರಾಜ್ಯದಾದ್ಯಂತವಿರುವ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗೆ ಆಶಾಕಿರಣವಾಗಿ ಮಾದರಿಯಾದ ಪುನಶ್ಚೇತನ ಕೇಂದ್ರವಾಗುವುದರಲ್ಲಿ ಸಂಶಯವಿರುವುದಿಲ್ಲ. ಆದಕಾರಣ ನಮ್ಮ ಸಂಸ್ಥೆಗೆ ಧನಸಹಾಯ ನೀಡಿ ಈ ಯೋಜನೆಯನ್ನು ಯಶಸ್ವಿ-ಗೊಳಿಸಿಕೊಡಬೇಕೆಂದು ತಮ್ಮಲ್ಲಿ ಮತ್ತೊಮ್ಮೆ ಕಳಕಳಿಯ ವಿನಂತಿ.

## BANK ACCOUNT DETAILS

Scan and Pay also

| | | |
|---|---|---|
| A/c Holder | - | M/s. Sevabharathi(R) |
| A/c No | - | 120000400920 |
| Account Type | - | Current Account, Canara Bank Dharmasthala Branch |
| IFS Code | - | CNRB0010246 |

## ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆ ಪದಾಧಿಕಾರಿಗಳಿಗೆ ಸೇವಾಭಾರತಿ ಕಾರ್ಯಚಟುವಟಿಕೆಗಳ ಮಾಹಿತಿ ಕಾರ್ಯಾಗಾರ



**ಉಡುಪಿ (ಮೇ 31):** ಭಾರತ್ ವಿಕಾಸ್ ಪರಿಷದ್ ಭಾರ್ಗವ ಶಾಖೆಯ ಪದಾಧಿಕಾರಿಗಳು ಹಾಗೂ ಸದಸ್ಯರಿಗೆ ಕನ್ಯಾಡಿ ಸೇವಾಭಾರತಿಯ ವಿವಿಧ ಸೇವಾ ಕಾರ್ಯಚಟುವಟಿಕೆಗಳ ಕುರಿತು ಮಾಹಿತಿ ಹಾಗೂ ಜಾಗೃತಿ ಕಾರ್ಯಾಗಾರವನ್ನು ನಡೆಸಲಾಯಿತು.

ಈ ಸಂದರ್ಭದಲ್ಲಿ ಸೇವಾಭಾರತಿಯ ಹಿರಿಯ ಪ್ರಬಂಧಕರಾದ ಶ್ರೀ ಚರಣ್ ಕುಮಾರ್ ಎಂ ರವರು ಸಂಸ್ಥೆಯ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ಹಾಗೂ ಕನ್ಯಾಡಿಯಲ್ಲಿ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರಿಗಾಗಿ ನಿರ್ಮಾಣವಾಗುತ್ತಿರುವ ಪುನಶ್ಚೇತನ ಕೇಂದ್ರದ ಕುರಿತು ಮಾಹಿತಿಯನ್ನು ನೀಡಿದರು. ಸಂಸ್ಥೆಯ ಕಾರ್ಯಚಟುವಟಿಕೆಗಳನ್ನು ಮೆಚ್ಚಿದ ಭಾರ್ಗವ ಶಾಖೆಯ ಪದಾಧಿಕಾರಿಗಳು ಮುಂದಿನ ದಿನಗಳಲ್ಲಿಯೂ ಸೇವಾಕಾರ್ಯಗಳಿಗೆ ಸಹಕಾರ ನೀಡುವ ಭರವಸೆಯನ್ನು ವ್ಯಕ್ತಪಡಿಸಿದರು. ಈ ಸಂದರ್ಭದಲ್ಲಿ ಕನ್ಯಾಡಿ ಸೇವಾಭಾರತಿಯ ಕಾರ್ಯದರ್ಶಿಯಾದ ಶ್ರೀ ವಿಷ್ಣುಪ್ರಸಾದ್ ತೆಂಕಿಲ್ಲಾಯ ಉಪಸ್ಥಿತರಿದ್ದರು.

## ಪುತ್ತೂರಿನ ನವೀನ್ ಕೈಕಾರ ಹಾಗೂ ಕುಟುಂಬಸ್ಥರಿಂದ ಸೌತಡ್ಕ ಸೇವಾಧಾಮಕ್ಕೆ ಭೇಟಿ



**ಸೌತಡ್ಕ (ಮೇ 30):** ರಾಷ್ಟ್ರೀಯ ಸ್ವಯಂಸೇವಕ ಸಂಘದ ಪುತ್ತೂರು ಜಿಲ್ಲಾ ಕಾರ್ಯವಾಹರಾದ ಶ್ರೀ ನವೀನ್ ಕೈಕಾರ ಅವರೊಂದಿಗೆ ಅವರ ಕುಟುಂಬಸ್ಥರಾದ ಕ್ಯಾಪ್ಟನ್ ಶಿಬಿನ್ ಆರ್ ಆಳ್ವ ಹಾಗೂ ಅವರ ಪತ್ನಿ ಶ್ರೀಮತಿ ಪೂಜಾ ಮೂಲೆ ರವರು ಸೌತಡ್ಕ, ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ, ಸೇವಾಧಾಮಕ್ಕೆ ಮೇ 30 ರಂದು ಭೇಟಿ ನೀಡಿದರು. ಈ ಸಂದರ್ಭದಲ್ಲಿ ಅವರು ಸೇವಾಧಾಮದ ವಿವಿಧ ಕಾರ್ಯಚಟುವಟಿಕೆಗಳ ಬಗ್ಗೆ ಮಾಹಿತಿ ತಿಳಿದು, ಅಲ್ಲಿನ ದಿವ್ಯಾಂಗರ ಆರೋಗ್ಯ ಹಾಗೂ ಯೋಗಕ್ಷೇಮವನ್ನು ವಿಚಾರಿಸಿ ಸೇವಾಧಾಮದಲ್ಲಿ ನಡೆಯುತ್ತಿರುವ ಕಾರ್ಯಚಟುವಟಿಕೆಗಳ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.

ಸೇವಾಭಾರತಿಯ ಅಧ್ಯಕ್ಷ ಹಾಗೂ ಸೇವಾಧಾಮದ ಸಂಸ್ಥಾಪಕರಾದ ಶ್ರೀ ಕೆ.ವಿನಾಯಕ ರಾವ್ ಹಾಗೂ ಸಿಬ್ಬಂದಿ ವರ್ಗದವರು ಉಪಸ್ಥಿತರಿದ್ದರು.

## SANGAM ವತಿಯಿಂದ Finance & Accounts Refresher Workshop



ಮೇ 29 ಹಾಗೂ 30ರಂದು ನಡೆದ 2 ದಿನಗಳ “Finance & Accounts Refresher Workshop” ನಲ್ಲಿ ಅನುಸರಣೆ ಮತ್ತು ಹಣಕಾಸು ವ್ಯವಸ್ಥಾಪಕರಾದ ಶ್ರೀ ಮೋಹನ್ ಎಸ್. ರವರು ಭಾಗವಹಿಸಿದರು.

ಧ್ವನಿ ಫೌಂಡೇಶನ್‌ನ Graduated Partnersಗಳ Alumni ವೇದಿಕೆಯಾದ SANGAM ವತಿಯಿಂದ ಈ ಕಾರ್ಯಾಗಾರವನ್ನು ಆಯೋಜಿಸಲಾಗಿತ್ತು. ಹಣಕಾಸು ನಿರ್ವಹಣೆ, ಲೆಕ್ಕಪತ್ರ ಪದ್ಧತಿ, ಆರ್ಥಿಕ ಅನುಸರಣೆ ಹಾಗೂ ದಾಖಲೆ ನಿರ್ವಹಣೆ ಕುರಿತಂತೆ ವಿಶೇಷ ತರಬೇತಿ ಮತ್ತು ಮಾರ್ಗದರ್ಶನವನ್ನು ಕಾರ್ಯಾಗಾರದಲ್ಲಿ ನೀಡಲಾಯಿತು.

# ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು

**ಸೇವಾಧಾಮದಲ್ಲಿ ಪುನಶ್ಚೇತನ ಪಡೆಯುತ್ತಿರುವ ದಿವ್ಯಾಂಗರಿಗೆ ದೇಣಿಗೆಯನ್ನು ನೀಡುವ ಮೂಲಕ ತಮ್ಮ ವಿಶೇಷ ದಿನವನ್ನು ಆಚರಿಸಿ ಎಲ್ಲರಿಗೂ ಮಾದರಿಯಾಗಿದ್ದೀರಿ.**



**ಶ್ರೀ ಗುರುರಾಜ್ ಶೆಟ್ಟಿ**
ಗಂಟಿಹೊಳೆ



**ಶ್ರೀ ಅಖಿಲೇಶ್ ಎಸ್**
ಬಾಳೆಹೊನ್ನೂರು



**ಶ್ರೀ ಆಶ್ರಿತ್ ಸಿ ಪಿ ಮತ್ತು ಛಾಯ ಸಿ ಎಸ್** , ಕನ್ಯಾಡಿ



**ಶ್ರೀಮತಿ ಬೇಬಿ ಮತ್ತು ಶ್ರೀ ಉಮೇಶ್ ಪೂಜಾರಿ**, ಗುರಿಪಳ್ಳ





**ಶ್ರೀಮತಿ ರವಿಜ ಎಸ್ ರಾವ್**, ಕನ್ಯಾಡಿ



**ಮಾಸ್ಟರ್ ಅದ್ವೈತ್ ಪೈ**,
ಕನ್ಯಾಡಿ



**ಶ್ರೀ ಭವಿತ್ ರೈ ಮತ್ತು ಭವ್ಯ ರೈ**, ಬೆಂಗಳೂರು




**ಶ್ರೀ ಗೌರಿಶಂಕರ್ ರಾವ್ ಮತ್ತು ಶ್ರೀಮತಿ ರಾಜಲಕ್ಷ್ಮಿ** , ಧರ್ಮಸ್ಥಳ



**ಕು। ಸುಮನ**,
ಅಳದಂಗಡಿ



**ಡಾ। ಯು ರವಿಂದ್ರನಾಥ್**
ಮುಂಡಾಜೆ



**ಶ್ರೀ ಹರೀಶ್ ಕುಮಾರ್ ಮತ್ತು ಶ್ರೀಮತಿ ಚಂದ್ರಕಲಾ**, ಮಂಗಳೂರು



**ಶ್ರೀ ಬಿ ಕೃಷ್ಣಪ್ಪ ಗುಡಿಗಾರ್**, ಅಲೆಕ್ಕಿ



**ಶ್ರೀ ಸತೀಶ**,
ಕೊಕ್ಕಡ



**ಶ್ರೀಮತಿ ಮಮತಾ ವಿಶ್ವನಾಥ್**, ಯುಎಸ್ಎ




**ಶ್ರೀಮತಿ ಮಂಜುಳಾ ಉತ್ತಪ್ಪ**, ಬೆಂಗಳೂರು



**ಶ್ರೀ ಪ್ರಜ್ವಲ್ ಸಾಲ್ಯಾನ್**,
ಬಂಟ್ವಾಳ



**ಶ್ರೀಮತಿ ಪ್ರಮೀಳಾ ಮತ್ತು ಶ್ರೀ ರಘು ಶೆಟ್ಟಿ**, ಚಿಕ್ಕಮಗಳೂರು



**ಶ್ರೀ ಹರೀಶ್ ಗಂಭೀರ್ ಮತ್ತು ಶ್ರೀಮತಿ ಸಂಗೀತಾ** , ಬೆಂಗಳೂರು



**ಶ್ರೀ ರಂಜಿತ್ ಕುಮಾರ್**,
ಪಟ್ರಮೆ

## ತಮ್ಮ ವಿಶೇಷ ದಿನವನ್ನು ವಿಶಿಷ್ಟ ರೀತಿಯಲ್ಲಿ ಆಚರಿಸಿ ಮಾದರಿಯಾದವರು



**ಡಾ| ಚೇತನ್,** ಬೆಳಾಲು



**ಶ್ರೀ ಸಂಪತ್ ರತ್ನ ರಾವ್ ಎಸ್,** ಉಜಿರೆ



**ಶ್ರೀಮತಿ ಲತಾ ಭಟ್,** ಉಡುಪಿ



**ಶ್ರೀ ಶೌರ್ಯ ವಿ ರಾವ್,** ಬೆಂಗಳೂರು



**ಶ್ರೀ ವರುಣ್,** ಉಳ್ಳಾಲ



**ಶ್ರೀ ವಸಂತ್** ಉಜಿರೆ



**ಶ್ರೀ ಚಂದ್ರಕಾಂತ್ ಗೊರೆ,** ಪುತ್ತೂರು



**ಶ್ರೀಮತಿ ರಾಜೀವಿ** ಕೊಕ್ಕಡ



**ಡಾ ಎ. ಜಯಕುಮಾರ್ ಶೆಟ್ಟಿ,** ಅರ್ಕುಳ



**ಶ್ರೀ ಶ್ರೀಧರ್ ಕೆ ವಿ,** ಉಜಿರೆ




**ಶ್ರೀ ನಾರಾಯಣ ರಾಮಕೃಷ್ಣ ಕೋಮಾರ್ ,** ಬೆಂಗಳೂರು



**ಶ್ರೀ ಪಿಯೂಷ್,** ಮಂಗಳೂರು



**ಶ್ರೀಮತಿ ಪವಿತ್ರಾ ಜಿ.ಕೆ,** ನಿಡ್ಲೆ



**ಶ್ರೀ ರಾಮದಾಸ್ ಉಡುಪ, ಶ್ರೀಮತಿ ಶ್ರೀದೇವಿ ಉಡುಪ,** ಉಡುಪಿ

## ಸೌತಡ್ಕ ಸೇವಾಧಾಮ ಪುನಶ್ಚೇತನ ಕೇಂದ್ರಕ್ಕೆ ಒಂದು ಹೊತ್ತಿನ ಊಟಕ್ಕಾಗಿ ದೇಣಿಗೆ



ಬೆಳ್ತಂಗಡಿ ಭಜೋರೆ ಮಾರುತಿ ಕುಣಿತ ಭಜನೆ ತಂಡದವರು ಸೌತಡ್ಕ ಬೆನ್ನುಹುರಿ ಅಪಘಾತಕ್ಕೊಳಗಾದ ದಿವ್ಯಾಂಗರ ಪುನಶ್ಚೇತನ ಕೇಂದ್ರ ಸೇವಾಧಾಮಕ್ಕೆ ಮೇ 30 ರಂದು ಭೇಟಿ ನೀಡಿ, ಒಂದು ಹೊತ್ತಿನ ಊಟಕ್ಕೆ ರೂ. 3,000 ದೇಣಿಗೆಯನ್ನು ನೀಡಿ ಸಹಕರಿಸಿದ್ದಾರೆ. ಸಿಬ್ಬಂದಿ ವರ್ಗದವರು ಸಂಸ್ಥೆಯ ಪರವಾಗಿ ದೇಣಿಗೆಯನ್ನು ಸ್ವೀಕರಿಸಿ ಧನ್ಯವಾದವಿತ್ತರು.

## ನಿಮಗಿದು ತಿಳಿದಿರಲಿ

### ಬೆನ್ನುಹುರಿಯ ರಚನೆ ಮತ್ತು ಗಾತ್ರ (Structure & Size):

ಒಬ್ಬ ವಯಸ್ಕ ಪುರುಷನಲ್ಲಿ ಬೆನ್ನುಹುರಿಯು ಸುಮಾರು 45 ಸೆಂಟಿಮೀಟರ್ (18 ಇಂಚು) ಮತ್ತು ಮಹಿಳೆಯರಲ್ಲಿ ಸುಮಾರು 43 ಸೆಂಟಿಮೀಟರ್ ಉದ್ದವಿರುತ್ತದೆ. ಬೆನ್ನುಹುರಿಯು ಅತ್ಯಂತ ಮೃದುವಾದ ನರಕೋಶಗಳ ಕಟ್ಟು. ಇದನ್ನು ಯಾವುದೇ ಹಾನಿಯಾಗದಂತೆ ಬೆನ್ನೆಲುಬು (Vertebral Column) ಎಂಬ ಗಟ್ಟಿಯಾದ ಮೂಳೆಯ ಕೋಟೆಯು ರಕ್ಷಿಸುತ್ತದೆ. ಮೆನಿಂಜಸ್ (Meninges): ಮೆದುಳಿನಂತೆ ಬೆನ್ನುಹುರಿಯ ಸುತ್ತಲೂ ಮೂರು ರಕ್ಷಣಾತ್ಮಕ ಪೊರೆಗಳಿರುತ್ತವೆ. ಇವುಗಳನ್ನು ಮೆನಿಂಜಸ್ ಎಂದು ಕರೆಯಲಾಗುತ್ತದೆ.

## ನಮ್ಮ ಯೋಜನೆಗಳು

**ಆರೋಗ್ಯಮ್ :** ರಕ್ತದಾನ ಶಿಬಿರಗಳ ಆಯೋಜನೆ ಮತ್ತು ಆ್ಯಂಬುಲೆನ್ಸ್ ಸೇವೆಗಳು.

**ಸಬಲಿನಿ :** ಮಹಿಳಾ ಸ್ವಾವಲಂಬನಕ್ಕಾಗಿ ವೃತ್ತಿ ತರಬೇತಿ

**ಸೇವಾಧಾಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಪುನಶ್ಚೇತನ ಕೇಂದ್ರ,

**ಸೇವಾಪಥ :** ಮಾಸಿಕ ಈ-ನ್ಯೂಸ್ ಲೆಟರ್ .

**ಸೇವಾ ಸಂಗಮ :** ಬೆನ್ನುಹುರಿ ಅಪಘಾತಗೊಂಡವರಿಗಾಗಿ ಆನ್‌ಲೈನ್ ಮೂಲಕ ಸಂಬಂಧಿತ ತಜ್ಞರಿಂದ ಮಾಹಿತಿ, ತರಬೇತಿ ಹಾಗೂ ಮಾರ್ಗದರ್ಶನ.

**ಆರೋಗ್ಯ ಬಿಂದು:** ಫಲಾನುಭವಿಗಳಿಗೆ ಕನಿಷ್ಠ ದರದಲ್ಲಿ ಸೆಲ್ಫ್ ಕೇರ್ & ಮೆಡಿಕಲ್ ಕಿಟ್ ಗಳು

## ತಾವು ಹೀಗೂ ನಮ್ಮ ಸಂಸ್ಥೆಯೊಂದಿಗೆ ಕೈಜೋಡಿಸಬಹುದಾಗಿದೆ

### ಸಂಸ್ಥೆಗೆ ದೇಣಿಗೆ ಮೂಲಕ ಸಹಕಾರ

ರೂ. 2000/ - ನೀಡುವುದರ ಮೂಲಕ ಒಟ್ಟು ಫಲಾನುಭವಿಯ ಒಂದು ತಿಂಗಳ ಮೆಡಿಕಲ್ ಕಿಟ್ ಗಳಿಗಾಗಿ ಸಹಕಾರ.

ರೂ. 6,000/ -ನೀಡುವುದರ ಮೂಲಕ ಒಬ್ಬ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಗಾಗಿ ಸಹಕಾರ

ರೂ. 4,500/ - ನೀಡುವುದರ ಮೂಲಕ ಫಲಾನುಭವಿಯ ಒಂದು ತಿಂಗಳ ಪುನಶ್ಚೇತನ ಚಿಕಿತ್ಸೆಯ ಸಂದರ್ಭ ಪೋಷಕರಿಗಾಗಿ ಸಹಕಾರ

ರೂ. 3,000/ - ನೀಡುವುದರ ಮೂಲಕ ಸೇವಾಧಾಮದಲ್ಲಿ ಒಂದು ಹೊತ್ತಿನ ಊಟೋಪಚಾರಕ್ಕೆ ಸಹಕಾರ

ರೂ. 10,000/ -ನೀಡುವುದರ ಮೂಲಕ ಸಮುದಾಯ ಭೇಟಿಗಾಗಿ ಸಹಕಾರ

ರೂ. 15,000/ - ನೀಡುವುದರ ಮೂಲಕ ಒಬ್ಬ ಫಲಾನುಭವಿಗಳಿಗೆ ಒಂದು ಗಾಲಿಕುರ್ಚಿಯ ಕೊಡುಗೆ

ರೂ. 10,000/- ನೀಡುವುದರ ಮೂಲಕ ಕೇಂದ್ರದಲ್ಲಿ ಹುಟ್ಟು ಹಬ್ಬದ ಆಚರಣೆ ಮಾಡುವುದು

## DONATE & JOIN US IN OUR MISSION

A/c Holder - M/s. Sevabharathi(R)
A/c No - 01682200072637
IFS Code - CNRB0010168
Bank - Canara Bank, Kokkada Branch

## Support us for constructions of Rehabilitation Centre

SEVABHARATHI REGD

A/c Holder - M/s. Sevabharathi(R)
A/c No - 120000400920
Account Type - Current Account Canara Bank Dharmasthala Branch
IFS Code - CNRB0010246

# ಬೆನ್ನುಹುರಿ ಅಪಘಾತದ ನಡುವೆಯೂ ಆತ್ಮವಿಶ್ವಾಸದಿಂದ ಬದುಕು ಕಟ್ಟಿಕೊಂಡ ಮಾದಾಪುರದ ಸೈಫುದ್ದೀನ್ ಎಂ.ಇ



ಮಾನವನ ಜೀವನದಲ್ಲಿ ಸುಖ–ದುಃಖಗಳು ಸಹಜ. ಕೆಲವರು ಸಣ್ಣ ಕಷ್ಟಕ್ಕೂ ಕುಗ್ಗಿಬಿಡುತ್ತಾರೆ. ಆದರೆ ಕೆಲವು ವ್ಯಕ್ತಿಗಳು ಜೀವನ ಎಷ್ಟೇ ಕಠಿಣ ಪರೀಕ್ಷೆ ನೀಡಿದರೂ ಧೈರ್ಯದಿಂದ ಎದುರಿಸಿ ಇತರರಿಗೆ ಸ್ಫೂರ್ತಿಯಾಗುತ್ತಾರೆ. ಅಂತಹ ಅಪರೂಪದ ವ್ಯಕ್ತಿಗಳಲ್ಲಿ ಸೈಫುದ್ದೀನ್ ಎಂ.ಇ ಅವರು ಒಬ್ಬರು.

ಸೈಫುದ್ದೀನ್ ಎಂ.ಇ ಅವರು ಮೂಲತಃ ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲೂಕಿನ ಮಾದಾಪುರದ ನಿವಾಸಿ. ಇವರು 1988ರ ಆಗಸ್ಟ್ 8ರಂದು ಶ್ರೀ ಇಬ್ರಾಹಿಂ ಮತ್ತು ಶ್ರೀಮತಿ ಜುಬೈದಾ ದಂಪತಿಯ ಪುತ್ರರಾಗಿ ಜನಿಸಿದರು. ಬಾಲ್ಯದಿಂದಲೇ ಸರಳ ಸ್ವಭಾವ ಮತ್ತು ದುಡಿಮೆ ಮನೋಭಾವ ಹೊಂದಿದ್ದ ಅವರು ತಮ್ಮ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣವನ್ನು ಊರಿನ ಸರ್ಕಾರಿ ಶಾಲೆಯಲ್ಲಿ ಪೂರ್ಣಗೊಳಿಸಿದರು. ಹೆಚ್ಚಿನ ವಿದ್ಯಾಭ್ಯಾಸವನ್ನು ಮುಂದುವರಿಸಲು ಇಷ್ಟವಿಲ್ಲದ ಕಾರಣ ಅವರು ಸಣ್ಣ ಪುಟ್ಟ ಕೆಲಸವನ್ನು ಮಾಡಲು ಆರಂಭಿಸಿದರು. ನಂತರ ಮೆಕ್ಯಾನಿಕಲ್ ಹಾಗೂ ವೆಲ್ಡಿಂಗ್ ಕೆಲಸದಲ್ಲಿ ತೊಡಗಿಕೊಂಡರು. ದುಡಿಮೆಯ ಮೂಲಕ ಸ್ವಾಭಿಮಾನದಿಂದ ಜೀವನ ಸಾಗಿಸುತ್ತಿದ್ದ ಅವರು ತಮ್ಮ ಕುಟುಂಬಕ್ಕೆ ಆಸರೆಯಾಗಿದ್ದರು.

ಆದರೆ ಜೀವನ ಅವರಿಗಾಗಿ ಒಂದು ಕಠಿಣ ಪರೀಕ್ಷೆಯನ್ನು ಕಾಯ್ದಿಟ್ಟಿತ್ತು. ಒಂದು ದಿನ ಮನೆಯಲ್ಲಿದ್ದ ಹಲಸಿನ ಮರಕ್ಕೆ ಹತ್ತಿ ಹಣ್ಣು ಕೀಳುವಾಗ ಆಯತಪ್ಪಿ ಕೆಳಗೆ ಬಿದ್ದರು. ತಕ್ಷಣ ಅವರನ್ನು ತೇಜಸ್ವಿನಿ ಆಸ್ಪತ್ರೆ ಗೆ ದಾಖಲಿಸಲಾಯಿತು. ವೈದ್ಯರು ಶಸ್ತ್ರಚಿಕಿತ್ಸೆಯ ನಂತರ ಅವರ ಬೆನ್ನುಹುರಿಗೆ ಗಂಭೀರ ಗಾಯವಾಗಿದ್ದು ಇನ್ನು ಮುಂದೆ ಸಾಮಾನ್ಯವಾಗಿ ನಡೆಯಲು ಸಾಧ್ಯವಿಲ್ಲ ಎಂದು ತಿಳಿಸಿದರು. ಈ ಸುದ್ದಿ ಅವರ ಕುಟುಂಬಕ್ಕೆ ದೊಡ್ಡ ಆಘಾತವಾಗಿತ್ತು. ಅಪಘಾತದ ನಂತರ ಸುಮಾರು 12 ವರ್ಷಗಳ ಕಾಲ ಅವರು ಮನೆಯಲ್ಲಿಯೇ ಮಲಗಿದ್ದ ಸ್ಥಿತಿಯಲ್ಲಿ ಜೀವನ ನಡೆಸಬೇಕಾಯಿತು. ಬೆನ್ನುಹುರಿ ಗಾಯದ ಬಗ್ಗೆ ಸರಿಯಾದ ಅರಿವು ಇಲ್ಲದ ಕಾರಣ ಹಲವು ಕಷ್ಟಗಳನ್ನು ಅನುಭವಿಸಿದರು. ಆದರೂ ಅವರು ಎಂದಿಗೂ ಧೈರ್ಯ ಕಳೆದುಕೊಳ್ಳಲಿಲ್ಲ. ಮನೆಯ ಮೇಲ್ಛಾವಣಿಗೆ ಹಗ್ಗ ಕಟ್ಟಿ ಅದನ್ನು ಹಿಡಿದು ನಿಧಾನವಾಗಿ ಎದ್ದು ಕುಳಿತುಕೊಳ್ಳಲು ಪ್ರಯತ್ನಿಸಿದರು. ನಂತರ ಕ್ಯಾಲಿಪರ್ ಬಳಸಿ ನಡೆಯಲು ಪ್ರಯತ್ನಿಸಿದರೂ ಇದರಿಂದ ಅನೇಕ ಗಾಯಗಳನ್ನು ಅನುಭವಿಸಿದರು. ನೋವು, ನಿರಾಸೆ ಮತ್ತು ಸಂಕಷ್ಟಗಳು ಅವರ ಜೀವನದ ಭಾಗವಾಗಿದ್ದರೂ ಅವರು ಹೋರಾಟವನ್ನು ನಿಲ್ಲಿಸಲಿಲ್ಲ.

ಮುಂದೆ ಅವರು ಚಿಕಿತ್ಸೆಗಾಗಿ ಕೊಚ್ಚಿ ಯ ಫಿಸಿಯೋಥೆರಪಿ ಕೇಂದ್ರಕ್ಕೆ ತೆರಳಿದರು. ಆದರೆ ಅಲ್ಲಿ ನಿರೀಕ್ಷಿತ ಮಟ್ಟದ ಚೇತರಿಕೆ ಕಂಡುಬರಲಿಲ್ಲ. ಆದರೂ ಅವರು ನಿರಾಶರಾಗದೆ ತಮ್ಮ ಸ್ವಂತ ಪ್ರಯತ್ನದ ಮೂಲಕ ಬದುಕನ್ನು ಪುನಃ ಕಟ್ಟಿಕೊಳ್ಳಲು ಮುಂದಾದರು. ಈ ಸಮಯದಲ್ಲಿ VRW ಮೂಲಕ ಸೇವಾಧಾಮ ಸಂಸ್ಥೆಯ ಪರಿಚಯವಾಯಿತು. ಅಲ್ಲಿಂದ ಅನೇಕ ಸೌಲಭ್ಯವನ್ನು ಪಡೆದುಕೊಂಡರು ಹಾಗೆ "ನಿಯೋಬೋಲ್ಟ್" ಸಾಧನವನ್ನು ಪಡೆದುಕೊಂಡ ನಂತರ ತಮ್ಮ ಕೆಲಸಗಳನ್ನು ತಾವೇ ಮಾಡಿಕೊಳ್ಳುವಷ್ಟು ಆತ್ಮವಿಶ್ವಾಸವನ್ನು ಗಳಿಸಿದರು.

ತಮ್ಮ ಜೀವನದ ಕಷ್ಟಗಳನ್ನು ಅನುಭವಿಸಿದ ಸೈಫುದ್ದೀನ್ ಅವರು "ನನ್ನಂತೆಯೇ ಇನ್ನೊಬ್ಬರು ಸಂಕಷ್ಟ ಅನುಭವಿಸಬಾರದು" ಎಂಬ ಉದ್ದೇಶದಿಂದ ಸಮಾಜಸೇವೆಯ ಕಡೆ ಗಮನ ಹರಿಸಿದರು. ಅವರು KMCC ಚಾರಿಟೇಬಲ್ ಟ್ರಸ್ಟ್ ಜೊತೆ ಕೈಜೋಡಿಸಿ ಅಗತ್ಯವಿರುವವರಿಗೆ ನೆರವಾಗುವ ಕಾರ್ಯದಲ್ಲಿ ತೊಡಗಿಕೊಂಡಿದ್ದಾರೆ. ಆಸ್ಪತ್ರೆಗೆ ಸೇರಿಸುವುದು, ಚಿಕಿತ್ಸೆಗಾಗಿ ಸಹಾಯ ಮಾಡುವುದು ಹಾಗೂ ಅಗತ್ಯ ಸೌಲಭ್ಯಗಳನ್ನು ಒದಗಿಸುವಂತಹ ಸೇವೆಗಳನ್ನು ನಿಸ್ವಾರ್ಥವಾಗಿ ಮಾಡುತ್ತಿದ್ದಾರೆ.

ಇದರ ಜೊತೆಗೆ ಅವರು ರಿಯಲ್ ಎಸ್ಟೇಟ್ ವ್ಯವಹಾರ ಮತ್ತು ವೆಲ್ಡಿಂಗ್ ಕೆಲಸವನ್ನು ಮಾಡಿಕೊಂಡು ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ. ದೈಹಿಕ ಅಸಮರ್ಥತೆ ಇದ್ದರೂ ಮನೋಬಲ ಮತ್ತು ಆತ್ಮವಿಶ್ವಾಸದಿಂದ ಬದುಕನ್ನು ಗೆದ್ದಿರುವ ಅವರು ಇಂದು ಅನೇಕರಿಗೆ ಮಾದರಿಯಾಗಿದ್ದಾರೆ.

ಸೈಫುದ್ದೀನ್ ಎಂ.ಇ ಅವರ ಜೀವನ ನಮಗೆ ಒಂದು ಮಹತ್ವದ ಪಾಠವನ್ನು ಕಲಿಸುತ್ತದೆ. ಜೀವನದಲ್ಲಿ ಎಷ್ಟೇ ಕಷ್ಟಗಳು ಬಂದರೂ ಧೈರ್ಯ ಮತ್ತು ಆತ್ಮವಿಶ್ವಾಸ ಇದ್ದರೆ ಯಾವುದನ್ನಾದರೂ ಜಯಿಸಬಹುದು. ಅವರ ಬದುಕು ಕೇವಲ ಹೋರಾಟದ ಕಥೆಯಲ್ಲ; ಅದು ಸಹನೆ, ಪರಿಶ್ರಮ ಮತ್ತು ಮಾನವೀಯತೆಯ ಜೀವಂತ ಉದಾಹರಣೆಯಾಗಿದೆ.

**ಶುಭಹಾರೈಸಲು ಸಂಪರ್ಕಿಸಿ :99454 32320**